ನವಸಾಕ್ಷರ ಪುಸ್ತಕ ಮಾಲೆ ೫೦

ರಾಮಾಯಣ

ಮಲ್ಲೇಪುರಂ ಜಿ. ವೆಂಕಟೇಶ್



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀಯುತರಾದ
ಹಾ. ಮಾ. ನಾಯಕ
ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೫೦

ರಾಮಾಯಣ

ಮಲ್ಲೇಪುರಂ ಜಿ. ವೆಂಕಟೇಶ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೧೧

RAMAYANA : By Mallepuram G. Venkatesh. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ.ಲಿ.
೧೨/೧೩, ಲಾಲ್‌ಬಾಗ್ ಫೋರ್ಟ್ ರಸ್ತೆ,
ಬೆಂಗಳೂರು – ೫೬೦ ೦೦೪.

ರಾಮಾಯಣ

ಕ್ರೌಂಚಾರಣ್ಯದಲ್ಲಿ ಒಬ್ಬ ಬೇಡನಿದ್ದ. ಅವನು ಕಳ್ಳತನ ಮಾಡಿಕೊಂಡು ಬದುಕಿದ್ದ. ಒಂದು ದಿನ ಸಪ್ತರ್ಷಿಗಳು ಆ ದಾರಿಯಲ್ಲಿ ಬಂದರು. ಅವನು ಅವರನ್ನು ತಡೆದು " ನಿಮ್ಮಲ್ಲಿರುವುದನ್ನು ಕೊಟ್ಟು ಹೋಗಿ " ಎಂದ. ಅವರು ಇವನನ್ನು ನೋಡಿದರು. "ಕೊಡದಿದ್ದರೆ ಏನು ಮಾಡುವೆ ?" ಎಂದರು. ಆಗ ಆ ಬೇಡನು ತನ್ನ ವೃತ್ತಿಗೆ ತಕ್ಕಂತೆ "ತಲೆ ಒಡೆಯುವೆನು" ಎಂದ. ಅವರು ನಕ್ಕರು. " ಅದು ಪಾಪವಲ್ಲವೇ " ಎಂದರು. " ಪಾಪವೋ ಗೀಪವೋ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಮಕ್ಕಳನ್ನು ಕಾಪಾಡಬೇಕು ಎಂದ." ಈ ಕೆಲಸದಿಂದ ಬರುವ ಪಾಪವನ್ನು ನಿನ್ನ ಮನೆಯವರು ಹಂಚಿಕೊಳ್ಳುವರೋ ಕೇಳಿ ಬಾ " ಎಂದರು.

ಬೇಡರವನಿಗೆ ಅವರ ಮಾತಿನ ಬಗೆ ಗೊತ್ತಾಗಲಿಲ್ಲ. ಆದರೂ ಮನೆಗೆ ಹೋದ. ಋಷಿಗಳು ಹೇಳಿಕೊಟ್ಟಂತೆ ಕೇಳಿದ. ಅವನ ಹೆಂಡತಿ ಮಕ್ಕಳು ಅವನ ಮಾತನ್ನು ಕೇಳಿ "ನೀನು ನಮಗೆ ಅನ್ನ ಬಟ್ಟೆ ಕೊಡುವುದಕ್ಕೆ ಮಾತ್ರ ಬಾಧ್ಯ. ಅದನ್ನು ಸಂಪಾದಿಸಲು ಏನು ಮಾಡುವೆಯೋ ನಮಗೇಕೆ ಅದರ ಗೋಜು. ಅದರಿಂದ ಬರುವ ಪಾಪ ನಿನ್ನದೇ ಹೊರತು ನಮ್ಮದಲ್ಲ" ಎಂದರು. ಅವನ ಮನಸ್ಸು ಶೂನ್ಯವಾಯಿತು. ಜಗತ್ತು ಬೇಡವೆನಿಸಿತು.

ಋಷಿಗಳ ಬಳಿಗೆ ಬಂದ. ಅವರು ಅವನಿಗೆ ಒಳ್ಳೆಯ ಮಾತುಗಳನ್ನು ಹೇಳಿದರು. ಅವನು ಅಲ್ಲಿಯೇ ತಪಸ್ಸಿಗೆ ಕುಳಿತ. ಅವನ ಮೇಲೆ ಹುತ್ತವು ಬೆಳೆಯುತ್ತಾ ಹೋಯಿತು.

ಹೀಗೆಯೇ ಇರುವಾಗ ಇನ್ನೊಮ್ಮೆ ಸಪ್ತರ್ಷಿಗಳು ಅತ್ತ ಬಂದರು. ಅವರಿಗೆ ಹಿಂದಿನದೆಲ್ಲ ನೆನಪಾಯಿತು. ಅವನನ್ನು ಈಚೆಗೆ ಕರೆದರು. ಸುತ್ತಲೂ ಬೆಳೆದಿದ್ದ ಹುತ್ತವನ್ನು ಭೇದಿಸಿಕೊಂಡು ಈಚೆ ಬಂದ. ಅವನ ತಪಸ್ಸನ್ನು ಕಂಡು ಸಪ್ತರ್ಷಿಗಳಿಗೆ ಆಶ್ಚರ್ಯವಾಯಿತು. 'ಹುತ್ತ' (ವಾಲ್ಮೀಕ)ವನ್ನು ಭೇದಿಸಿಕೊಂಡು ಬಂದದ್ದರಿಂದ 'ವಾಲ್ಮೀಕಿ'ಯಾಗು ಎಂದು ಆಶೀರ್ವಾದ ಮಾಡಿದರು. ಅವನೇ ಮುಂದೆ 'ವಾಲ್ಮೀಕಿ' ಎನಿಸಿಕೊಂಡ. ಈತನೇ ರಾಮಾಯಣವನ್ನು ಬರೆದದ್ದು. ರಾಮಾಯಣದ ಕತೆ ಹೀಗಿದೆ :

ಕೋಸಲ ದೇಶದಲ್ಲಿ ಸರಯೂ ನದಿ ಹರಿಯುತ್ತಿತ್ತು. ಆ ನದೀ ತೀರದಲ್ಲಿ ಅಯೋಧ್ಯೆ ಎಂಬ ಪಟ್ಟಣವಿತ್ತು. ಅಲ್ಲಿ ದಶರಥನೆಂಬ ರಾಜ ಆಳುತ್ತಿದ್ದನು. ಆತನು ಪುತ್ರಕಾಮೇಷ್ಟಿ ಯಾಗವನ್ನು ಮಾಡಿ ನಾಲ್ವರು ಮಕ್ಕಳನ್ನು ಪಡೆದನು. ಪಟ್ಟಮಹಿಷಿಯಾದ ಕೌಸಲ್ಯೆಯಿಂದ ಹುಟ್ಟಿದವನು ಶ್ರೀರಾಮ. ಕೈಕೆಯ ಹೊಟ್ಟೆಯಲ್ಲಿ ಹುಟ್ಟಿದವನು ಭರತ. ಸುಮಿತ್ರೆಯ ಹೊಟ್ಟೆಯಲ್ಲಿ ಲಕ್ಷ್ಮಣ ಶತ್ರುಘ್ನರೆಂಬ ಅವಳಿ ಮಕ್ಕಳು ಹುಟ್ಟಿದರು.

ಒಂದು ದಿನ ವಿಶ್ವಾಮಿತ್ರರು ದಶರಥನನ್ನು ಕಾಣಲು ಬಂದರು. ದಶರಥನಿಗೆ ತುಂಬ ಸಂತೋಷ ಆಯಿತು. ನೀರೇ ಇಲ್ಲದ ದೇಶದಲ್ಲಿ ಮಳೆ ಬಿದ್ದಂತಾಯಿತು. ದಶರಥ ವಿಶ್ವಾಮಿತ್ರರನ್ನು ಉಪಚಾರ ಮಾಡಿದನು. ಆಮೇಲೆ "ನೀವು ಯಾವ ಕಾರ್ಯಕ್ಕಾಗಿ ಬಂದಿದ್ದೀರಿ? ನೀವು ಹೇಳಿದ ಕೆಲಸವನ್ನು ಮಾಡಿಕೊಡುವೆನು" ಎಂದು ಹೇಳಿದನು. ಆಗ ವಿಶ್ವಾಮಿತ್ರರು " ನಾನೊಂದು ಸಿದ್ಧಿಗಾಗಿ ನಿಯಮ ಹಿಡಿದಿದ್ದೇನೆ. ಆ ನಿಯಮ ಇನ್ನೇನು ಕೊನೆಯಾಗಬೇಕು ಅನ್ನುವಷ್ಟರಲ್ಲಿ ಮಾರೀಚ, ಸುಬಾಹು ಎಂಬ ರಾಕ್ಷಸರು ಕೆಡಿಸುತ್ತಿದ್ದಾರೆ. ನಾನು ನಿಯಮದಲ್ಲಿದ್ದಾಗ ಯುದ್ಧ ಮಾಡುವಂತಿಲ್ಲ. ಆದ್ದರಿಂದ ಆ ರಾಕ್ಷಸರನ್ನು ನಾಶ ಮಾಡುವುದಕ್ಕೆ ನಿನ್ನ ದೊಡ್ಡ ಮಗ ಶ್ರೀರಾಮನನ್ನು ಕಳುಹಿಸಿಕೊಡು " ಎಂದರು. ಆ ಮಾತು ಕೇಳಿ ಒಂದು ಗಳಿಗೆ ದಶರಥ ಚಿಂತೆಗೆ ಒಳಗಾದ. ಮತ್ತೆ ಎಚ್ಚರಗೊಂಡು ಅಳುತ್ತ "ನನ್ನ

ರಾಮನಿಗೆ ಇನ್ನೂ ಹದಿನಾರು ವರ್ಷ ತುಂಬಿಲ್ಲ. ಅವನಿಗೆ ಅಂಥ ಬಲಿಷ್ಠರಾದ ರಾಕ್ಷಸರ ಮೇಲೆ ಯುದ್ಧ ಮಾಡುವ ಶಕ್ತಿಯಿಲ್ಲ. ಅವನನ್ನು ಕರೆದುಕೊಂಡು ಹೋಗುವುದು ಸರಿಯೇ ?" ಎಂದನು. ಆಗ ಕುಲಗುರುಗಳಾದ ವಸಿಷ್ಠರು ವಿಶ್ವಾಮಿತ್ರರ ಪರಾಕ್ರಮ, ಅವರ ತಪಸ್ಸಿನ ಶಕ್ತಿಯನ್ನು ತಿಳಿಯಹೇಳಿದರು. ದಶರಥನು ಮರುಮಾತಾಡದೆ ಮಗನನ್ನು ಕಳುಹಿಸಿದನು. ರಾಮನೊಡನೆ ಲಕ್ಷ್ಮಣನೂ ಹೊರಟನು. ಇಬ್ಬರನ್ನೂ ಕರೆದುಕೊಂಡು ವಿಶ್ವಾಮಿತ್ರರು ಹೊರಟರು.

ವಿಶ್ವಾಮಿತ್ರರು ಸರಯೂ ನದಿಯ ದಕ್ಷಿಣ ತೀರದಲ್ಲಿ ಶ್ರೀರಾಮನಿಗೆ 'ಬಲಾ - ಅತಿಬಲಾ ' ಎಂಬ ಎರಡು ವಿದ್ಯೆಗಳನ್ನು ಹೇಳಿಕೊಟ್ಟರು. ಅವುಗಳನ್ನು ಪಡೆದವರಿಗೆ ಹಸಿವು - ಬಾಯಾರಿಕೆ ಇರುತ್ತಿರಲಿಲ್ಲ. ಅಲ್ಲಿಂದ ಅವರು ತಾಟಕಾವನಕ್ಕೆ ಬಂದರು. ಅಲ್ಲಿ ಸುಕೇತುವೆಂಬ ಯಕ್ಷರಾಜನ ಮಗಳಾದ ತಾಟಕಿಯೆಂಬವಳು ಇದ್ದಳು. ಅವಳ ಜೊತೆ ಅವನ ಮಗ ಮಾರೀಚನೂ ಇದ್ದನು. ಇವರಿಬ್ಬರನ್ನೂ ಕೊಲ್ಲಬೇಕೆಂದು ವಿಶ್ವಾಮಿತ್ರರು ಅಪ್ಪಣೆ ಕೊಟ್ಟರು. "ತಾಟಕಿ ಹೆಣ್ಣಾದರೂ ಅವಳನ್ನು ಕೊಲ್ಲುವುದು ಸರಿ. ಅವಳು ಹೆಂಗಸೆಂದು ಹಿಂಜರಿಯಬೇಡ " ಎಂದರು. ಆಗ ರಾಮನು ಬಿಲ್ಲಿಗೆ ಬಾಣ ಹೂಡಿ ಅವಳನ್ನು ಕೊಂದನು. ಅವಳು ಹತಳಾದಾಗ ದೇವತೆಗಳು ಸಂತೋಷಪಟ್ಟರು.

ಶ್ರೀರಾಮ ಲಕ್ಷ್ಮಣರನ್ನು ಕರೆದುಕೊಂಡು ವಿಶ್ವಾಮಿತ್ರರು ಸಿದ್ಧಾಶ್ರಮಕ್ಕೆ ಬಂದರು. ಯಾಗಾರ್ಥವಾಗಿ ಆರು ರಾತ್ರಿಗಳ ಮೌನದೀಕ್ಷೆಯನ್ನು ಕೈಗೊಂಡರು. ಆ ರಾತ್ರಿಗಳಲ್ಲಿ ರಾಮ ಲಕ್ಷ್ಮಣರು ನಿದ್ರಾಹಾರಗಳನ್ನು ಬಿಟ್ಟು ಆಶ್ರಮವನ್ನು ಕಾದರು. ಆರನೆಯ ದಿನ ಮಾರೀಚ-ಸುಬಾಹುಗಳು ರಕ್ತಮಾಂಸಗಳ ಮಳೆಯನ್ನು ಸುರಿಸುತ್ತ ಬಂದರು. ರಾಮನು ವಾಯುವ್ಯಾಸ್ತ್ರವನ್ನು ಬಿಟ್ಟು ಮಾರೀಚನನ್ನು ಹೊಟ್ಟನ್ನು ತೂರುವ ಗಾಳಿಯಂತೆ ತೂರಿಬಿಟ್ಟನು. ಮಾರೀಚನು ಹೋಗಿ ಸಾಗರದಲ್ಲಿ ಬಿದ್ದನು. ಸುಬಾಹುವನ್ನು ಆಗ್ನೇಯಾಸ್ತ್ರದಿಂದ ಕೊಂದನು. ಉಳಿದ ರಾಕ್ಷಸರು ಓಡಿಹೋದರು. ಯಜ್ಞವು ಮುಗಿಯಿತು. ಎಲ್ಲರೂ ತೃಪ್ತಿಗೊಂಡರು.

ಅಲ್ಲಿಂದ ಮುಂದೆ ವಿಶ್ವಾಮಿತ್ರರು ರಾಮಲಕ್ಷ್ಮಣರನ್ನು ಕರೆದುಕೊಂಡು ಮಿಥಿಲೆಗೆ ಹೊರಟರು. ದಾರಿಯಲ್ಲಿ ಅಹಲ್ಯೆಯ ಆಶ್ರಮ ಸಿಕ್ಕಿತು. ಅಹಲ್ಯೆಯು "ರಾಮನು ಬಂದಾನೇ " ಎಂದು ಕಾದಿದ್ದಳು. ರಾಮದರ್ಶನದಿಂದ ಆಕೆಗೆ ಬಂದಿದ್ದ ಕಲ್ಲಾಗಿರುವ ಶಾಪ ಕಳೆಯಿತು. ಅದೇ ವೇಳೆಗೆ ಆಕೆಯ ಪತಿ ಗೌತಮರು ಬಂದರು. ಶ್ರೀರಾಮನಿಗೆ ವಿಧಿವತ್ತಾಗಿ ಪೂಜೆಯನ್ನು ಒಪ್ಪಿಸಿದರು. ಅಲ್ಲಿಂದ ಅವರೆಲ್ಲ ಮುಂದೆ ನಡೆದರು.

ಮಿಥಿಲೆಯಲ್ಲಿ ಜನಕನು ಅವರನ್ನು ಬಹುಗೌರವದಿಂದ ಬರಮಾಡಿಕೊಂಡನು. ಜನಕನಿಗೆ ರಾಮ ಲಕ್ಷ್ಮಣರನ್ನು ಕಂಡು ಆಶ್ಚರ್ಯವಾಯಿತು. ಅವರು ದೇವಲೋಕದಿಂದ ಇಳಿದು ಬಂದ ದೇವತೆಗಳೋ ಎನ್ನಿಸಿತು. ಕುತೂಹಲದಿಂದ ಕೂಡಿದ ಜನಕನಿಗೆ ವಿಶ್ವಾಮಿತ್ರರು ರಾಮ ಲಕ್ಷ್ಮಣರ ವಿಷಯವನ್ನು ಹೇಳಿದರು.



ಸೀತಾ ರಾಮ ಕಲ್ಯಾಣ

ಒಂದು ದಿನ ಜನಕನು ವಿಶ್ವಾಮಿತ್ರರ ಕೋರಿಕೆಯಂತೆ ಶಿವಧನುಸ್ಸನ್ನು ರಾಮ ಲಕ್ಷ್ಮಣರಿಗೆ ತೋರಿಸಿದನು. ಪೆಟ್ಟಿಗೆಯಲ್ಲಿದ್ದ ಆ ಬಿಲ್ಲನ್ನು ನೂರೈವತ್ತು ಮಂದಿ ಕಷ್ಟಪಟ್ಟು ಎಳೆತಂದರು. ಜನಕನು, ರಾಮ ಲಕ್ಷ್ಮಣರಿಗೆ ಅದನ್ನು ತೋರಿಸಿದನು. ವಿಶ್ವಾಮಿತ್ರರು "ಮಗು ರಾಮ, ಧನುಸ್ಸನ್ನು ನೋಡು" ಎಂದರು. ರಾಮನು "ಬ್ರಹ್ಮರ್ಷಿಯೆ ಈ ಬಿಲ್ಲನ್ನು ಮುಟ್ಟುವೆನು. ಅದರ ಹೆದೆಯನ್ನು ಕಟ್ಟಲು ಪ್ರಯತ್ನಿಸುವೆನು" ಎಂದನು. ಎಲ್ಲರೂ ನೋಡುತ್ತಿರಲು, ಹುರಿಯನ್ನು ಕಟ್ಟಿದನು. ಅವನು ಹುರಿಯನ್ನು ಎಳೆದ ರಭಸಕ್ಕೆ ಬಿಲ್ಲು ಮಧ್ಯಕ್ಕೆ ಮುರಿದು ಹೋಯಿತು. ಆ ಶಬ್ದಕ್ಕೆ ಜನಕ, ವಿಶ್ವಾಮಿತ್ರ ರಾಮ ಲಕ್ಷ್ಮಣರನ್ನು ಬಿಟ್ಟು ಮಿಕ್ಕವರೆಲ್ಲರೂ ಮೂರ್ಛೆ ಹೋದರು. ಸ್ವಲ್ಪ ಹೊತ್ತಿಗೆ ಮೂರ್ಛೆ ಬಿದ್ದವರು ಎಚ್ಚರಗೊಂಡರು. ಜನಕನು ತನ್ನ ಪ್ರತಿಜ್ಞೆಯಂತೆ ಸೀತೆಯನ್ನು ರಾಮನಿಗೆ ಮದುವೆ ಮಾಡಿಕೊಡಲು ಸಿದ್ಧನಾದನು. ದೂತರು ಅಯೋಧ್ಯೆಗೆ ಹೋಗಿ ದಶರಥನನ್ನು ಕರೆತಂದರು. ಸೀತಾರಾಮರ ಮದುವೆ ಚೆನ್ನಾಗಿ ನಡೆಯಿತು.

ದಶರಥನು ಮದುಮಕ್ಕಳೊಡನೆ ರಾಜಧಾನಿಗೆ ಹಿಂತಿರುಗಿದನು. ಅಲ್ಲಿ ರಾಮನು ತಂದೆ ತಾಯಿಯರ ಸೇವೆಯನ್ನು ಮಾಡಿಕೊಂಡು ಸುಖವಾಗಿದ್ದನು. ಸೀತೆಯು ರಾಮನಿಗೆ ಬಹಳ ಪ್ರಿಯವಾಗಿದ್ದಳು.

ಒಂದು ದಿನ ಕೈಕೆಯ ಸೋದರನಾದ ಯುಧಾಜಿತುವು ಬಂದನು. ಅವನು ಸೋದರಳಿಯನಾದ ಭರತನನ್ನು ಕರೆದುಕೊಂಡು ಹೋದನು. ಅವನೊಡನೆ ಶತ್ರುಘ್ನನೂ ಜೊತೆಯಲ್ಲಿ ಹೋದನು. ಶ್ರೀರಾಮ ಲಕ್ಷ್ಮಣರೊಡನೆ ಸುಖವಾಗಿದ್ದ ದಶರಥನಿಗೆ ಒಂದು ದಿನ ಮಗನಿಗೆ ಯುವರಾಜಪಟ್ಟ ಕಟ್ಟಬೇಕು ಎನ್ನಿಸಿತು. ದೇಶದಲ್ಲಿರುವ ಮುಖಂಡರನ್ನೆಲ್ಲ ಕರೆಸಿಕೊಂಡನು. ಮನಸ್ಸಿನ ಬಯಕೆಯನ್ನು ಅವರಿಗೆ ತಿಳಿಸಿದನು. ಅವರೆಲ್ಲರೂ ಮಳೆಗರೆಯುತ್ತಿರುವ ಮೋಡವನ್ನು ಕುಣಿಯುತ್ತಾ ಸ್ವಾಗತಿಸುವ ನವಿಲುಗಳಂತೆ ಒಪ್ಪಿದರು. ವಸಿಷ್ಠರಿಗೆ ಈ ವಿಷಯ ತಿಳಿಯಿತು. ದಶರಥ, ಶ್ರೀರಾಮನನ್ನು ಕರೆಸಿಕೊಂಡು "ನಿನ್ನ ಒಳ್ಳೆಯ ಗುಣಗಳಿಂದ ಜನರನ್ನು ಒಲಿಸಿಕೊಂಡಿದ್ದೀಯೆ, ಆದ್ದರಿಂದ ನಿನಗೆ ಪುಷ್ಯ ನಕ್ಷತ್ರದಲ್ಲಿ ಯುವರಾಜ ಪಟ್ಟಕಟ್ಟುವೆ. ಅದರ ಸಂಬಂಧವಾಗಿ ವ್ರತವನ್ನು ಆಚರಿಸು " ಎಂದು ಹೇಳಿ

ಕಳುಹಿದನು. ಶ್ರೀರಾಮ ತಾಯಿಯ ಅಂತಃಪುರಕ್ಕೆ ಹೋದನು. ತಾಯಿ ಈ ವಿಷಯ ತಿಳಿದು ಸಂತೋಷಗೊಂಡಳು. ಮಗ್ಗುಲಲ್ಲಿ ನಿಂತಿದ್ದ ತಮ್ಮನನ್ನು ನೋಡಿ, ರಾಮನು "ಲಕ್ಷ್ಮಣ ನೀನು ನನ್ನ ಎರಡನೆಯ ಪ್ರಾಣ. ಈ ಐಶ್ವರ್ಯವೆಲ್ಲ ನಿನ್ನದು. ಈ ರಾಜ್ಯವನ್ನು ತೆಗೆದುಕೊಂಡಿರುವುದು ನಿನಗಾಗಿ " ಎಂದು ಹೇಳಿದನು. ತಾಯಿಯನ್ನು ಬೀಳ್ಕೊಂಡು ಸೀತೆಯ ಅಂತಃಪುರಕ್ಕೆ ಹೋದನು.

ದಶರಥನು ಕೈಕೆಯ ಅಂತಃಪುರಕ್ಕೆ ಬಂದನು. ಆ ವೇಳೆಗೆ ಮಂಥರೆಯು ಆಕೆಯ ಬುದ್ಧಿಯನ್ನು ಕೆಡಿಸಿದ್ದಳು. ಅರಸನನ್ನು ಬಲವಂತ ಮಾಡಿ ಹಿಂದೆ ಕೊಟ್ಟಿದ್ದ ವರಗಳನ್ನು ಈಗ ಕೊಡೆಂದಳು. ಒಂದರಿಂದ ರಾಮನಿಗೆ ವನವಾಸ, ಇನ್ನೊಂದರಿಂದ ತನ್ನ ಮಗನಿಗೆ ರಾಜ್ಯ. ಅರಸನು ಒದ್ದಾಡಿ ಹೋದನು. ಕೈಕೆಯ ರಾಮನನ್ನು ಕರೆಸಿದಳು. ತನ್ನ ಎರಡು ವರಗಳ ಬಗ್ಗೆ ತಿಳಿಸಿದಳು. ಈ ಮಾತನ್ನು ಕೇಳಿ ರಾಮನಿಗೆ ವ್ಯಥೆಯಾಗಲಿಲ್ಲ. "ನಾನು ಕಾಡಿಗೆ ಹೋಗುವೆನು. ನೀನು ಪ್ರಸನ್ನಳಾಗು. ತಂದೆಯ ಮಾತು ಸರಿಯೇ ತಪ್ಪೇ ಎಂದು ವಿಚಾರಿಸುವುದಿಲ್ಲ. ನಾನು ಹದಿನಾಲ್ಕು ವರ್ಷ ವನದಲ್ಲಿರುತ್ತೇನೆ " ಎಂದನು. ರಾಮನು ತಂದೆಗೂ ಚಿಕ್ಕಮ್ಮನಿಗೂ ನಮಸ್ಕಾರ ಮಾಡಿ ಹೊರಟನು. ಅವನ ಮುಖದ ಕಾಂತಿ ಕಡಿಮೆಯಾಗಲಿಲ್ಲ. ಆತನ ಹರ್ಷವು ಅಡಗಲಿಲ್ಲ.

ಅಲ್ಲಿಂದ ರಾಮನು ತಾಯಿಯ ಅರಮನೆಗೆ ಬಂದನು. ಆಕೆಗೆ ಎಲ್ಲವನ್ನೂ ಹೇಳಿದನು. ಆ ಮಾತುಗಳನ್ನು ಕೇಳಿ ಕೌಸಲ್ಯೆ ಕೊಡಲಿಯಿಂದ ಕಡಿದ ಮರದಂತೆ ದೊಪ್ಪನೆ ಕೆಳಕ್ಕೆ ಬಿದ್ದಳು. ಎಚ್ಚೆತ್ತು ಬಹುವಾಗಿ ಗೋಳಾಡಿದಳು. ದೀನಳಾಗಿ ಅಳುತ್ತಿರುವ ತಾಯಿಯನ್ನು ರಾಮನು ಸಂತೈಸಿದನು. ಲಕ್ಷ್ಮಣನಿಗೆ ಸಮಾಧಾನವನ್ನು ಹೇಳಿದನು. ಮತ್ತೆ ಕೌಸಲ್ಯೆಗೆ ತಲೆ ಬಾಗಿ ಹೇಳಿಕೊಂಡನು. "ಅಮ್ಮಾ ನನಗೆ ಹೋಗಲು ಅಪ್ಪಣೆ ಕೊಡು. , ವನವಾಸವನ್ನು ಮುಗಿಸಿಕೊಂಡು ಬರುತ್ತೇನೆ. ತಂದೆಯ ಮಾತಿನಂತೆ ನಡೆಯಬೇಕು. ಇದೇ ಸನಾತನವಾದ ಧರ್ಮ. ಆದ್ದರಿಂದ ದುಃಖವನ್ನು ನುಂಗಿಕೋ " ಎಂದು ಸಮಾಧಾನ ಪಡಿಸಿದನು. ತಾಯಿಯ ಆಶೀರ್ವಾದ ಪಡೆದು ಸೀತೆಯ ಅಂತಃಪುರಕ್ಕೆ ಬಂದನು. ಧರ್ಮಜ್ಞಳೂ ಧರ್ಮಚಾರಿಣಿಯೂ ಆದ ಜಾನಕಿಗೆ ನಡೆದುದೆಲ್ಲವನ್ನೂ ಹೇಳಿದನು. ಆಕೆಯು

ಗಂಡನೊಡನೆ ಬರುವೆನೆಂದಳು. ಆಗ ಯತ್ನವಿಲ್ಲದೆ ಅವಳನ್ನೂ, ಅತ್ತುಕೊಂಡ ಲಕ್ಷ್ಮಣನನ್ನೂ ಕರೆದುಕೊಂಡು ಕಾಡಿಗೆ ಹೊರಟನು. ತಂದೆ ದಶರಥನು ಗೋಳಿಟ್ಟನು. ಅಂತಃಪುರದ ಜನರೆಲ್ಲ ಅತ್ತರು.

ರಾಮನು ಬಹುಕಾಲದ ಸ್ನೇಹಿತನಾದ ಗುಹನ ಬಳಿಗೆ ಬಂದನು. ಅಲ್ಲಿ ಜಟೆಗಳನ್ನು ಧರಿಸಿ ಭರದ್ವಾಜರ ಆಶ್ರಮಕ್ಕೆ ಹೋದನು. ಧರ್ಮಾತ್ಮರಾದ ಭರದ್ವಾಜರು ಸ್ವಾಗತಿಸಿದರು. ಅಲ್ಲಿಯೇ ಇರುವಂತೆ ಪ್ರಾರ್ಥಿಸಿದರು. ರಾಮನು ಅದಕ್ಕೆ ಒಪ್ಪಲಿಲ್ಲ. ಸೀತೆಯೊಪ್ಪುವಂತಹ ಕಾಡಿನ ಜಾಗವೊಂದನ್ನು ನೋಡಿ ಹೇಳಬೇಕೆಂದನು. ಅವರು ಚಿತ್ರಕೂಟದಲ್ಲಿ ಇರಬಹುದೆಂದರು. ಅದರಂತೆಯೇ ಮರುದಿನ ಅವರು ಯಮುನಾನದಿಯನ್ನು ದಾಟಿ ಅಲ್ಲಿಗೆ ಹೋದರು.

ಇತ್ತ ಸೀತಾರಾಮಲಕ್ಷ್ಮಣರನ್ನು ಗುಹನ ರಾಜ್ಯದಲ್ಲಿ ಬಿಟ್ಟು ಮಂತ್ರಿ ಸುಮಂತ್ರನು ಹಿಂದಿರುಗಿದನು. ಆತನಿಂದ ದಶರಥನು ಮಕ್ಕಳ ಸ್ಥಿತಿಯನ್ನು ತಿಳಿದು 'ಹೋ' ಎಂದು ಅತ್ತನು. ಅನಂತರದಲ್ಲಿ ಅವನು ಎರಡು ಮೂರು ದಿನಗಳೊಳಗಾಗಿ ಪ್ರಾಣವನ್ನು ಬಿಟ್ಟನು. ಮಂತ್ರಿಗಳು ಭರತನನ್ನು ಕರೆಸಿಕೊಂಡರು. ನಡೆದ ಘಟನೆಗಳೆಲ್ಲಾ ಭರತನಿಗೆ ತಿಳಿಯಿತು. ಅದಕ್ಕೆ ಬಹುವಾಗಿ ದುಃಖಪಟ್ಟನು. ಅವನು ತಂದೆಯ ಉತ್ತರಕ್ರಿಯಾದಿಗಳನ್ನು ತೀರಿಸಿಕೊಂಡು ಅಣ್ಣನನ್ನು ಹುಡುಕಿಕೊಂಡು ಹೊರಟನು.

ಚಿತ್ರಕೂಟದಲ್ಲಿ ಗುಡಿಸಲು ಮಾಡಿಕೊಂಡಿದ್ದ ರಾಮನಿಗೆ ಒಂದು ದಿನ ಕಾಡಿನಲ್ಲಿ ಗದ್ದಲವಾಗುವುದು ಕೇಳಿಸಿತು. ಅದೇನು ನೋಡೆಂದು ತಮ್ಮನನ್ನು ಕಳುಹಿಸಿದನು. ಬರುತ್ತಿರುವ ಸೇನೆಯನ್ನು ನೋಡಿ ಅದು ಭರತನದೆಂದು ಗುರುತಿಸಿದನು. ಆತನಿಗೆ ಕೋಪ ಬಂದಿತು. ರಾಮನು "ಭರತ ಮಹಾ ಬುದ್ಧಿವಂತ. ನಾವು ವನವಾಸಕ್ಕೆ ಹೋದದ್ದು ತಿಳಿದು, ಪುನಃ ಕರೆದೊಯ್ಯಲು ಬರುತ್ತಿರಬೇಕು. ಆತನು ನಮ್ಮಂತೆಯೇ ದಶರಥನ ಮಗ " ಎಂದು ಹೇಳಿದನು.



ಭರತ ರಾಮನನ್ನು ನೋಡಲು ಬಂದಿರುವುದು

ಭರತನು ಅಣ್ಣನನ್ನು ಹುಡುಕಿಕೊಂಡು ನಡೆದುಕೊಂಡೇ ಬಂದಿದ್ದ. ಅವನ ಜೊತೆಗೆ ಶತ್ರುಘ್ನ, ವಸಿಷ್ಠರು, ಹಾಗೂ ಮೂವರು ತಾಯಂದಿರೂ ಬಂದಿದ್ದರು. ಭರತನು ಜಿಂಕೆಚರ್ಮವನ್ನುಟ್ಟ ಶ್ರೀರಾಮನನ್ನು ಕಂಡನು. "ಆರ್ಯ 'ಎಂದನು. ಮುಂದಕ್ಕೆ ಏನೂ ಹೇಳಲಾರದೆ ಹೋದನು. ಬಂದವರೆಲ್ಲರೂ ರಾಮನಿಗೆ ಕಾಣಿಸಿಕೊಂಡರು.

ತನ್ನ ಹಾಗೆ ಜಟೆ, ನಾರುಬಟ್ಟೆ ಹಾಕಿಕೊಂಡು ಕೈ ಮುಗಿದುಕೊಂಡು ನೆಲದ ಮೇಲೆ ಬಿದ್ದಿರುವ ಭರತನನ್ನು ಹಿಡಿದೆತ್ತಿ, ಆಲಂಗಿಸಿ, ತೊಡೆಯಮೇಲೆ ಕೂರಿಸಿಕೊಂಡನು ರಾಮ. ಭರತನಿಂದ ತಂದೆ ಸತ್ತ ವಿಷಯ ತಿಳಿಯಿತು. ಆಗ ರಾಮನು "ನೀನು ಧರ್ಮದಿಂದ ರಾಜ್ಯಭಾರ ಮಾಡು" ಎಂದು ಭರತನಿಗೆ ಹೇಳಿದನು. ಈ ಮಾತು ಕೇಳಿ "ಧರ್ಮವೇ ಇಲ್ಲದ ನನಗೆ ರಾಜ್ಯಧರ್ಮದಿಂದ ಏನಾದೀತು ? ನೀನು ಹಿಂತಿರುಗಿ ಬಾ. ನಮ್ಮ ಕುಲವನ್ನು

ಕಾಪಾಡು " ಎಂದು ಭರತನು ಕೇಳಿಕೊಂಡನು. ರಾಮನು ಈ ಮಾತಿಗೆ ಒಪ್ಪಲಿಲ್ಲ."ಈ ಚಿನ್ನದ ಪಾದುಕೆಗಳನ್ನು ಮೆಟ್ಟು. ಇವು ಎಲ್ಲರ ಯೋಗಕ್ಷೇಮಗಳನ್ನು ನೋಡಿಕೊಳ್ಳುವುವು. ನೀನು ಬರುವವರೆಗೆ ನಾನು ನಾರುಬಟ್ಟೆಯನ್ನುಟ್ಟು ಊರ ಹೊರಗೆ ಇರುತ್ತೇನೆ. ಹದಿನಾಲ್ಕು ವರ್ಷದ ಅವಧಿ ಮುಗಿಯುತ್ತಿದ್ದಂತೆ ನಿನ್ನನ್ನು ನೋಡದಿದ್ದರೆ ಬೆಂಕಿಗೆ ಬೀಳುತ್ತೇನೆ " ಎಂದನು. ಇದಕ್ಕೆ ರಾಮನು ಒಪ್ಪಿಕೊಂಡನು. ಭರತನು ಪಾದುಕೆಗಳನ್ನು ತಲೆಯ ಮೇಲೆ ಇಟ್ಟುಕೊಂಡು ಹಿಂದಿರುಗಿದನು. ಅಯೋಧ್ಯೆಯ ಹೊರಗೆ ನಂದಿಗ್ರಾಮವೆಂಬ ಊರನ್ನು ಕಟ್ಟಿಕೊಂಡು, ರಾಮಪಾದುಕೆಗಳನ್ನು ಅಲ್ಲಿಟ್ಟು, ತಾನು ರಾಮದಾಸನಾಗಿ ರಾಜ್ಯವಾಳುತ್ತಿದ್ದನು.

ಸ್ವಲ್ಪ ದಿನಗಳು ಕಳೆದುವು. ಸೀತಾರಾಮಲಕ್ಷ್ಮಣರು ಚಿತ್ರಕೂಟವನ್ನು ಬಿಟ್ಟು ಅತ್ರಿಋಷಿಗಳ ಆಶ್ರಮಕ್ಕೆ ಬಂದು, ಅಲ್ಲಿಂದ ದಂಡಕಾರಣ್ಯಕ್ಕೆ ಬಂದರು. ಅಲ್ಲಿ ವಿರಾಧನೆಂಬ ರಾಕ್ಷಸನನ್ನು ಕೊಂದದ್ದಾಯಿತು. ಅಲ್ಲಿಂದ ಅಗಸ್ತ್ಯ ಋಷಿಗಳ ಆಶ್ರಮಕ್ಕೆ ಬಂದು ಇಲ್ವಲ ವಾತಾಪಿಗಳ ಕಥೆಯನ್ನು ಕೇಳಿ, ಪಂಚವಟಿಗೆ ಬಂದರು. ಅಲ್ಲಿ ಜಟಾಯುವಿನ ಗೆಳೆತನವಾಯಿತು. ಅವರು ಬಂದಾಗ ಮರಗಳೆಲ್ಲವೂ ಚಿಗುರಿ, ಹೂಬಿಟ್ಟಿದ್ದವು. ಎಲ್ಲಕ್ಕೂ ಅನುಕೂಲವಾಗಿರುವ ಸ್ಥಳದಲ್ಲಿ ಆಶ್ರಮವನ್ನು ಕಟ್ಟಿದರು. ಪಂಚವಟಿಯಲ್ಲಿ ಸೀತಾ ರಾಮಲಕ್ಷ್ಮಣರು ಸುಖವಾಗಿದ್ದರು. ಒಂದು ದಿನ ರಾಮ ಪರ್ಣಶಾಲೆಯಲ್ಲಿ ಋಷಿಗಳೊಡನೆ ಏನೇನೋ ಮಾತುಕತೆಗಳನ್ನು ಆಡುತ್ತಿದ್ದನು. ಆಗ ಅಲ್ಲಿಗೆ ಶೂರ್ಪನಖಿಯು ಬಂದಳು. ಅವಳಿಗೆ ರಾಮನನ್ನು ಗಂಡನನ್ನಾಗಿ ಮಾಡಿಕೊಳ್ಳಬೇಕೆನಿಸಿತು. ಅವಳು ರಾಕ್ಷಸಿ. ಗಳಿಗೆಗೊಂದು ರೂಪ ಹಾಕಬಲ್ಲವಳು. ಅವಳು ರಾಮನ ವೃತ್ತಾಂತವನ್ನು ಕೇಳಿದಳು. ರಾಮನು ತನ್ನ ವೃತ್ತಾಂತವೆಲ್ಲವನ್ನೂ ಹೇಳಿದನು. ಆಗ ಶೂರ್ಪನಖಿಯು ತನ್ನ ವೃತ್ತಾಂತವನ್ನು ಹೇಳಿದಳು. ಆಮೇಲೆ " ನನಗೆ ನಿನ್ನನ್ನು ನೋಡಿ ಆಸೆಯಾಗಿದೆ. ನೀನು ನನ್ನ ಗಂಡನಾಗು. ಸುಖವಾಗಿರೋಣ "ಎಂದಳು. ಅದಕ್ಕೆ ರಾಮ "ನನಗೆ ಮದುವೆಯಾಗಿದೆ. ನಿನ್ನನ್ನು ವರಿಸಲಾರೆ" ಎಂದನು. ಅವಳು ಲಕ್ಷ್ಮಣನ ಬಳಿ ಹೋದಳು. ಅವನೂ ಕೂಡ ಗದರಿಕೊಂಡನು. ಕೋಪಗೊಂಡ ಶೂರ್ಪನಖಿ ಸೀತೆಯನ್ನು ತಿನ್ನಲು ಹೋದಳು. ಆಗ ರಾಮನ ಅಪ್ಪಣೆಯಂತೆ ಲಕ್ಷ್ಮಣನು ಅವಳನ್ನು ಹಿಡಿದು ಮೂಗು ಕಿವಿಗಳನ್ನು ಕೊಯ್ದು ಓಡಿಸಿದನು.

ಅವಳು ಅಳುತ್ತ ರಾವಣನ ಬಳಿಗೆ ಹೋದಳು. ಅವನಿಗೆ ಎಲ್ಲ ವಿಷಯವನ್ನು ತಿಳಿಸಿದಳು. ಸೀತೆಯ ರೂಪವನ್ನು ವರ್ಣಿಸಿದಳು. ರಾವಣನಿಗೆ ಅವಳನ್ನು ಪಡೆಯುವ ಆಸೆಯಾಯಿತು. ರಾಮನನ್ನು ಕೊಂದು ಬರಲು ಖರದೂಷಣರೆಂಬ ರಾಕ್ಷಸರನ್ನು ಕಳುಹಿಸಿದನು. ಆದರೆ, ಅವರು ರಾಮನಿಂದ ಹತರಾದರು. ಇದನ್ನು ಕೇಳಿದ ರಾವಣನು ಮಾರೀಚನ ಬಳಿ ಹೋದನು. ಸೀತೆಯನ್ನು ಕದ್ದೊಯ್ಯಲು ಬಂದ ವಿಷಯ ತಿಳಿದು ಮಾರೀಚ ರಾವಣನಿಗೆ ಬುದ್ಧಿಹೇಳಿದನು. ಆದರೆ, ಮಾರೀಚನ ಮಾತನ್ನು ರಾವಣ ಕೇಳಲಿಲ್ಲ. ಮಾರೀಚನು ರಾವಣನ ಕೋರಿಕೆಯಂತೆ ಮಾಯಾಜಿಂಕೆಯಾದನು. ಅದು ಆಶ್ರಮದ ಸುತ್ತ ಓಡಾಡುತ್ತ ಸೀತೆಯ ಗಮನವನ್ನು ಸೆಳೆಯಿತು. ರಾಮನನ್ನು ಕರೆದು ಸೀತೆಯು ಜಿಂಕೆಯನ್ನು ತೋರಿಸಿದಳು. ತನಗೆ ಆ ಚಿನ್ನದ ಜಿಂಕೆ ಬೇಕೇ ಬೇಕು ಎಂದಳು.



ಮಾಯಾ ಜಿಂಕೆ

ರಾಮನು, ಸೀತೆಯ ರಕ್ಷಣೆಗೆ ಲಕ್ಷ್ಮಣನನ್ನು ನೇಮಿಸಿ ಜಿಂಕೆಯನ್ನು ಹಿಡಿಯಲು ಹೋದನು. ಅದು ರಾಮನನ್ನು ವಂಚಿಸುತ್ತ ಬಹು ದೂರ ಎಳೆದುಕೊಂಡು ಹೋಯಿತು. ಕೊನೆಗೂ ಅದು ಕೈಗೆ ಸಿಗಲಿಲ್ಲ. ಆಗ ರಾಮನು ಅದನ್ನು ಬಾಣದಿಂದ ಹೊಡೆದನು. ಅದು ಒಂದು ತಾಳೆಯ ಮರದುದ್ದ ಮೇಲಕ್ಕೆ ಹಾರಿ ಕೆಳಕ್ಕೆ ಬಿದ್ದಿತು. ಮಾರೀಚನು ಸಾಯುವಾಗ ರಾಮನ ದನಿಯಂತೆ ದನಿ ಮಾಡಿಕೊಂಡು "ಹಾ ಸೀತೆ ! ಹಾ ಲಕ್ಷ್ಮಣಾ !" ಎಂದು ಕೂಗಿದನು. ಮಾರೀಚನ ಕೂಗನ್ನು ಕೇಳಿ ಸೀತೆ ಹೆದರಿದಳು. ಲಕ್ಷ್ಮಣನನ್ನು ಕಳುಹಿಸಿದಳು. ಅವನು ಹೋಗಲು ಮನಸ್ಸಿಲ್ಲದೆ ಸೀತೆಯ ಬಲವಂತದಿಂದ ಹೋದನು. ಅದೇ ಸಮಯಕ್ಕೆ ರಾವಣನು ಸನ್ಯಾಸಿಯ ವೇಷದಿಂದ ಆಶ್ರಮಕ್ಕೆ ಬಂದನು. ಸೀತೆಯು ಅವನು ಸನ್ಯಾಸಿಯೆಂದು ತಿಳಿದು ಅತಿಥಿ ಸತ್ಕಾರ ಮಾಡಿದಳು. ಆಮೇಲೆ ತನ್ನ ಆಶೆಯನ್ನು ಹೇಳಿಕೊಂಡನು. "ನನ್ನ ಹೆಂಡತಿಯಾಗು ನಿನಗೆ ಐದು ಸಾವಿರ ದಾಸಿಯರನ್ನು ಕೊಡುವೆನು. ನಿನಗೆ ಈ ವನವಾಸವೇಕೆ ?" ಎಂದನು. ಈ ಮಾತುಗಳನ್ನು ಕೇಳಿ ಸೀತೆಗೆ ಭಯವಾಯಿತು. ಆದರೂ ಧೈರ್ಯ ತಂದುಕೊಂಡು ಬೈದಳು. ರಾವಣ ತನ್ನ ನಿಜರೂಪವನ್ನು ಧರಿಸಿದನು. ಬೆಟ್ಟದಂತಹ ಮೈ, ಕೆಂಪು ಬಟ್ಟೆಯನ್ನುಟ್ಟು ನಿಂತಿದ್ದಾನೆ. ಸೀತೆಯನ್ನು ಹಿಡಿದುಕೊಂಡು, ತನ್ನ ಮಾಯಾರಥದೊಳಕ್ಕೆ ಹಾಕಿಕೊಂಡು ಮೇಲಕ್ಕೆ ಹಾರಿದನು. ಆಗ ಸೀತೆ "ರಾಮಾ !ನನ್ನನ್ನು ಈ ದುಷ್ಟ ಹೊತ್ತುಕೊಂಡು ಹೋಗುತ್ತಿದ್ದಾನೆ. ಅಯ್ಯೋ "! ಎಂದು ಗಟ್ಟಿಯಾಗಿ ಅತ್ತಳು. ಸೀತೆಯು ಅಳುವುದನ್ನು ಕೇಳಿ ಜಟಾಯು ಓಡಿಬಂದನು. ರಾವಣನಿಗೂ ಜಟಾಯುವಿಗೂ ಯುದ್ಧ ನಡೆಯಿತು. ರಾವಣನು ಜಟಾಯುವಿನ ರೆಕ್ಕೆಗಳನ್ನೂ, ಕಾಲುಗಳನ್ನೂ ಕತ್ತರಿಸಿದನು. ಜಟಾಯು ಭೂಮಿಗೆ ಉರುಳಿದನು. ರಾವಣನು ಸೀತೆಯನ್ನು ಹೊತ್ತೊಯ್ದು ಅಶೋಕವನದಲ್ಲಿ ಇಟ್ಟನು.

ಇತ್ತ ರಾಮನು ಚಿನ್ನದ ಜಿಂಕೆಯನ್ನು ಕೊಂದು, ಗಡಿಬಿಡಿಯಿಂದ ಬರುವಾಗ ಮಧ್ಯ ದಾರಿಯಲ್ಲಿ ಲಕ್ಷ್ಮಣನು ಸಿಕ್ಕನು. ಅವನೊಡನೆ ಆಶ್ರಮಕ್ಕೆ ಬಂದು ನೋಡಿದರೆ ಸೀತೆ ಇಲ್ಲ. ಅವನಿಗೆ ಆಶ್ರಮವು ಶೂನ್ಯ ಎಂದೆನಿಸಿತು. ಬಹುವಾಗಿ ಗೋಳಿಟ್ಟನು. ಸುತ್ತಮುತ್ತ ಹುಡುಕಿದಾಗ ರೆಕ್ಕೆ ಕತ್ತರಿಸಿಬಿದ್ದ ಜಟಾಯುವನ್ನು ರಾಮಲಕ್ಷ್ಮಣರು ನೋಡಿದರು.

ಜಟಾಯು, ನಡೆದ ವೃತ್ತಾಂತವನ್ನೆಲ್ಲ ತಿಳಿಸಿದನು. ಅನಂತರ ರಾಮ ಲಕ್ಷ್ಮಣರು ಸೀತೆಯನ್ನು ಹುಡುಕಿಕೊಂಡು ಹೊರಟರು. ದಾರಿಯಲ್ಲಿ ಕಬಂಧನೆಂಬ ರಾಕ್ಷಸ ಅವರನ್ನು ಹಿಡಿದನು. ಅವನನ್ನು ಕೊಂದರು. ಅವನು ಮೊದಲಿದ್ದಂತೆ ಗಂಧರ್ವರೂಪ ಪಡೆದನು. ಸುಗ್ರೀವನಿಂದ ನಿಮಗೆ ಸಹಾಯವಾಗುವುದೆಂದು ಕಬಂಧನು ತಿಳಿಸಿದನು. ಅಲ್ಲಿಂದ ಅವರು ಋಷ್ಯಮೂಕ ಪರ್ವತದ ಕಡೆಗೆ ಹೋದರು. ದಾರಿಯಲ್ಲಿ ಶಬರಿಯ ಅತಿಥ್ಯವಾಯಿತು. ಆಕೆಯು "ರಾಮ, ಈಗ ನನ್ನ ಜನ್ಮ ಸಫಲವಾಯಿತು. ದೇವಶ್ರೇಷ್ಠನಾದ ನಿನ್ನನ್ನು ಪೂಜಿಸಿದೆನು. ನಿನ್ನ ಪ್ರಸಾದದಿಂದ ಅಕ್ಷಯವಾದ ಲೋಕಗಳನ್ನು ಹೊಂದುವೆನು " ಎಂದಳು. ರಾಮನು ಲಕ್ಷ್ಮಣನೊಡನೆ ಪಂಪಾಸರೋವರಕ್ಕೆ ಬಂದನು. ಆ ಸರೋವರವು ಸುಂದರವಾಗಿತ್ತು. ಅಲ್ಲಿ ಸ್ವಲ್ಪಕಾಲ ವಿಶ್ರಾಂತಿ ಪಡೆದರು. ಋಷ್ಯಮೂಕ ಪರ್ವತದ ಕಡೆಗೆ ನಡೆದರು. ಋಷ್ಯಮೂಕ ಪರ್ವತದಲ್ಲಿ ಓಡಾಡುತ್ತಿದ್ದ ಶ್ರೀರಾಮಲಕ್ಷ್ಮಣರನ್ನು ಸುಗ್ರೀವನು ಮರೆಯಿಂದ ನೋಡಿದನು. "ಇವರು ಯಾರು ನೋಡಿ ಬಾ " ಎಂದು ಹನುಮಂತನನ್ನು ಕಳುಹಿಸಿದನು. ಆತನು ಅವರನ್ನು ಕರೆತಂದು ಸುಗ್ರೀವನಿಗೆ ಸ್ನೇಹ ಮಾಡಿಸಿದನು. ಸುಗ್ರೀವನು ರಾಮನಿಗೆ ತನ್ನ ವಿಷಯವನ್ನು ಹೇಳಿದನು. ತಾನು ಹೆಂಡತಿಯನ್ನು ಕಳೆದುಕೊಂಡು ಅಲೆಯುತ್ತಿರುವ ವಿಷಯವನ್ನು ಹೇಳುತ್ತ ದುಃಖಿಸಿದನು. ರಾಮನು" ನಿನ್ನ ಶತ್ರುವನ್ನು ಕೊಂದು, ನಿನಗೆ ರಾಜ್ಯವನ್ನೂ, ನಿನ್ನ ಹೆಂಡತಿಯನ್ನೂ ಕೊಡಿಸುವೆನು " ಎಂದು ಹೇಳಿದನು. ಪ್ರತಿಯಾಗಿ ಸುಗ್ರೀವನು ಸೀತೆಯನ್ನು ಹುಡುಕಿಕೊಡುವೆನೆಂದು ಹೇಳಿದನು.

ಮರುದಿನ ಸುಗ್ರೀವನು ರಾಮಲಕ್ಷ್ಮಣರೊಡನೆ ಹೋಗಿ ವಾಲಿಯನ್ನು ಯುದ್ಧಕ್ಕೆ ಕರೆದನು. ಬಹು ದಿನಗಳ ನಂತರ ತಮ್ಮನು ಯುದ್ಧಕ್ಕೆ ಬಂದದ್ದು ತಿಳಿದು ವಾಲಿಗೆ ಆಶ್ಚರ್ಯವಾಯಿತು. ವಾಲಿಯ ಹೆಂಡತಿಗೆ ಭಯವಾಯಿತು. ಅವಳು ಯುದ್ಧ ಬೇಡವೆಂದು ಕೇಳಿಕೊಂಡಳು. ವಾಲಿಯು ಅವಳನ್ನು ಸಮಾಧಾನ ಪಡಿಸಿದನು. ವಾಲಿ ಸುಗ್ರೀವರಿಗೆ ಭಯಂಕರ ಯುದ್ಧವಾಯಿತು. ವಾಲಿಯಾರು? ಸುಗ್ರೀವನಾರು? ಎಂಬುದನ್ನು ತಿಳಿಯಲಾರದೆ ರಾಮನು ಸುಮ್ಮನಾದನು. ಸುಗ್ರೀವನಿಗೆ ಸೋಲಾಯಿತು. ಅವನಿಗೆ ಪೆಟ್ಟುಬಿದ್ದು ತುಂಬ ಗಾಯಗಳಾಗಿದ್ದವು. ಅವನು ರಾಮನ ಮೇಲೆ ರೇಗಿದನು. ರಾಮನು ಅವನಿಗೆ ಸಮಾಧಾನ

ಹೇಳಿದನು. ಮರುದಿನ ಗುರುತಿಗಾಗಿ ಸುಗ್ರೀವನಿಗೆ ಹೂವಿನ ಮಾಲೆಯನ್ನು ಹಾಕಿ ಕಳುಹಿಸಿದನು. ವಾಲಿ ಸುಗ್ರೀವರಿಬ್ಬರೂ ಯುದ್ಧಮಾಡುತ್ತಿರುವಾಗ ರಾಮನು ಬಾಣವನ್ನು ಉಪಯೋಗಿಸಿದನು. ಆ ಬಾಣದ ಪೆಟ್ಟಿಗೆ ವಾಲಿಯು ನೆಲದ ಮೇಲೆ ಬಿದ್ದನು. ಅವನನ್ನು ನೋಡಿದ ವಾಲಿಯು "ನೀನು ಅಧರ್ಮದಿಂದ ಮರೆಯಲ್ಲಿ ನಿಂತು ಕೊಲ್ಲಬಹುದೇ, ನೀನು ಮೋಸಗಾರ ಪಾಪಿ" ಎಂದು ಮನಸ್ಸಿಗೆ ಬಂದಂತೆ ಬಯ್ದನು. ಆಗ ರಾಮನು "ಧರ್ಮದ ಸೂಕ್ಷ್ಮವನ್ನು ನೀನು ತಿಳಿದಿಲ್ಲ. ಸುಮ್ಮನೆ ನನ್ನನ್ನು ತೆಗಳುವೆ. ಬೆಟ್ಟ, ಕಾಡು, ಮೇಡುಗಳಿಂದ ಕೂಡಿದ ಈ ಭೂಮಿ ಇಕ್ಷ್ವಾಕುಗಳದು. ಭರತನು ಈ ಭೂಮಿಯನ್ನು ರಕ್ಷಿಸುತ್ತಿದ್ದಾನೆ. ನಾವೂ ಇತರರೂ ಅವನ ಅಪ್ಪಣೆಯಂತೆ ಧರ್ಮರಕ್ಷಣೆಗಾಗಿ ತಿರುಗುತ್ತಿದ್ದೇವೆ. ಮಗಳು, ತಂಗಿ, ತಮ್ಮನ ಹೆಂಡತಿ, ಇವರನ್ನು ಕಾಮದಿಂದ ನೋಡುವವರನ್ನು ವಧಿಸುವುದೇ ಸರಿಯಾದ ಶಿಕ್ಷೆ. ನೀನು ಧರ್ಮವನ್ನು ಬಿಟ್ಟವನು." ಈ ಮಾತುಗಳನ್ನು ಕೇಳಿ ಅವನ ಮನಸ್ಸು ತೃಪ್ತವಾಯಿತು. ಆಗ ವಾಲಿಯು "ನೀನು ಗುರಿಯನ್ನು ತಿಳಿದವನು. ಇದು ಸರಿ. ಇದು ತಪ್ಪು ಎಂದು ತಿಳಿದವನು. ಪ್ರಜೆಗಳ ಹಿತವನ್ನು ಬಯಸುವವನು, ಯಾವ ಕಾರ್ಯಕ್ಕೆ ಯಾವ ಕಾರಣವೆಂಬುದನ್ನು ತಿಳಿಸುವುದರಲ್ಲಿ ನಿರ್ಮಲವಾದ ನಿನ್ನ ಬುದ್ಧಿ ಸ್ಥಿರವಾಗಿರುವುದು " ಎಂದು ಕೊಂಡಾಡಿದನು.

ರಾಮನು, ವಾಲಿಯ ಕೋರಿಕೆಯಂತೆ ಅಂಗದನಿಗೆ ಯುವರಾಜ ಪಟ್ಟವನ್ನು ಕಟ್ಟಿದನು. ಸುಗ್ರೀವನಿಗೆ ರಾಜಪಟ್ಟವನ್ನು ಕಟ್ಟಿದನು. ಆಮೇಲೆ ಸುಗ್ರೀವ ತನ್ನ ಹೆಂಡತಿಯೊಡನೆ ಸುಖವಾಗಿದ್ದನು. ಶ್ರೀರಾಮ ಲಕ್ಷ್ಮಣರು ಋಷ್ಯಮೂಕ ಪರ್ವತದಲ್ಲಿ ಕೆಲಕಾಲವನ್ನು ಕಳೆದರು.

ಒಂದು ದಿನ ಸುಗ್ರೀವನು, ತನ್ನ ಸೈನ್ಯವನ್ನೆಲ್ಲ ಸೇರಿಸಿದನು. ವಾನರ ವೀರರಿಗೆ ಕೊಟ್ಟ ವಚನವನ್ನು ತಿಳಿಸಿದನು. ಪ್ರತಿಯೊಬ್ಬರೂ ಸೀತೆಯನ್ನು ಹುಡುಕಲು ಸಿದ್ಧರಾದರು. ಸುಗ್ರೀವನು ಇಡೀ ಸೈನ್ಯವನ್ನು ಅನೇಕ ಗುಂಪುಗಳನ್ನಾಗಿ ವಿಂಗಡಿಸಿದನು. ಪ್ರತಿಯೊಂದು ದಿಕ್ಕಿನ ಕಡೆಗೂ ಒಂದೊಂದು ಗುಂಪನ್ನು ಕಳುಹಿಸಿದನು. ಸೀತೆಯನ್ನು ಹುಡುಕಲು ಕಳುಹಿಸಿದ ಕಪಿವೀರರಲ್ಲಿ ಅಂಗದ, ಹನುಮಂತ, ಸುಗ್ರೀವಾದಿಗಳಿದ್ದ ಗುಂಪು ದಕ್ಷಿಣ ದಿಕ್ಕಿಗೆ

ಹೊರಟಿತು. ಅವರು ಕಾಡುಮೇಡುಗಳನ್ನು ಸುತ್ತುತ್ತಾ ಒಂದು ದೊಡ್ಡ ಪರ್ವತದ ಬಳಿಗೆ ಬಂದರು. ಅಲ್ಲಿ ಸೀತೆಯಿದ್ದ ಸ್ಥಳವು ಸಂಪಾತಿಯಿಂದ ತಿಳಿಯಿತು. ಸಮುದ್ರದ ಮಧ್ಯದಲ್ಲಿದ್ದ ಲಂಕೆಗೆ ಹೋಗಿ ಬರುವುದಕ್ಕೆ ಶಕ್ತಿವಂತರಾರು? ಎಂದು ತಮ್ಮ ತಮ್ಮಲ್ಲೇ ವಿಚಾರಿಸಿಕೊಂಡರು. ಪ್ರತಿಯೊಬ್ಬರೂ ತಮ್ಮ ತಮ್ಮ ಶಕ್ತಿಯ ಬಗ್ಗೆ ಹೇಳಿಕೊಂಡರು. ಹೀಗೆ ವಿಚಾರಿಸಿಕೊಳ್ಳುತ್ತಿರುವಾಗ ಹನುಮಂತನು ಒಂದು ಮೂಲೆಯಲ್ಲಿ ಸುಮ್ಮನೆ ಕುಳಿತಿದ್ದನು. ವಾನರರ ಪೈಕಿ ಹಿರಿಯವನಾದ ಜಾಂಬವಂತನು ಹನುಮಂತನ ಕಡೆ ನೋಡಿದನು. ಆತನೇ ಈ ಸಮುದ್ರವನ್ನು ದಾಟಿ ಮರಳಿ ಬರಲು ಶಕ್ತಿವಂತನೆಂದು ತಿಳಿಸಿದನು. ಹನುಮಂತನನ್ನು ಕರೆದು, ಅವನ ಶಕ್ತಿಯನ್ನು ನೆನಪಿಸಿದನು. ಅವನು ಸಮುದ್ರವನ್ನು ದಾಟಲು ತಕ್ಕ ರೂಪವನ್ನು ಧರಿಸಿದನು.

ಹನುಮಂತನು ಎತ್ತರವಾದ ಪರ್ವತವನ್ನು ಏರಿದನು. ಪರ್ವತದಂತೆ ಮೈಯನ್ನು ಬೆಳೆಸಿಕೊಂಡನು. ಒಮ್ಮೆಲೆ ಜಿಗಿದನು. ಜಿಗಿದ ರಭಸಕ್ಕೆ ಸುತ್ತಮುತ್ತಲಿದ್ದ ಮರ-ಗಿಡ - ಬಳ್ಳಿ-ಹೂಗಳು ಕಿತ್ತು ಗಾಳಿಯಲ್ಲಿ ತೂರಾಡಿದವು. ಅವನ ಹಿಂದೆ ಸ್ವಲ್ಪ ದೂರ ಹೋದವು. ಹನುಮಂತನು ಲೀಲಾಜಾಲವಾಗಿ ಸಮುದ್ರದ ಮೇಲೆ ಹಾರುತ್ತಿದ್ದುದನ್ನು ಅವರೆಲ್ಲ ನೋಡಿದರು. ಅವರು ನೋಡುನೋಡುತ್ತಿದ್ದಂತೆ ಸಣ್ಣ ಚುಕ್ಕೆಯಂತೆ ಹನುಮಂತನು ಕಂಡನು. ಅವರೆಲ್ಲರೂ ಹನುಮಂತನು ಬರುವುದನ್ನು ಕಾಯುತ್ತ ಕುಳಿತರು.

ಹನುಮಂತನು ಸಮುದ್ರದ ಮೇಲೆ ಹಾರಿ ಬರುತ್ತಿರುವಾಗ ಸಿಂಹಿಕೆಯನ್ನು ಕೊಂದನು. ಗರುಡವೇಗದಿಂದ ಸುಮಾರು ನೂರು ಯೋಜನಗಳಷ್ಟು ದೂರ ಬಂದುಬಿಟ್ಟನು. ದೂರದಲ್ಲಿ ಒಂದು ಅರಣ್ಯದ ಸಾಲು ಕಾಣಿಸಿತು. ಮಲಯ ಪರ್ವತದ ಉಪವನಗಳೂ ಗೋಚರಿಸಿದವು. ದಕ್ಷಿಣ ತೀರದ ಸಮುದ್ರ ಪ್ರದೇಶ, ಜೌಗುನೆಲ, ಸಮುದ್ರಕ್ಕೆ ಧುಮುಕುವ ಸಂಗಮ ಸ್ಥಳಗಳು ಕಾಣಿಸಿದವು. ಜನ ತನ್ನನ್ನು ನೋಡಿಯಾರೆಂದು ದೇಹವನ್ನು ಚಿಕ್ಕದು ಮಾಡಿಕೊಂಡನು.

ಸಮುದ್ರದ ಆಚೆಯ ತೀರಕ್ಕೆ ಬಂದು ಸೇರಿದನು. ದೂರದಿಂದಲೇ ಲಂಕಾನಗರ ಕಾಣಿಸಿತು. ಅನೇಕ ಹೂಗಿಡ ಮರಗಳಿಂದ ಕೂಡಿದ್ದ ತ್ರಿಕೂಟ ಪರ್ವತ ಎಂಬ ಹೆಸರಿನ ಶಿಖರದ ಮೇಲೆ ಧುಮುಕಿದನು. ಧುಮುಕಿದ ರಭಸಕ್ಕೆ ಹೆದರಿ ಪಕ್ಷಿಪ್ರಾಣಿಗಳು ಓಡಿಹೋದವು. ಹನುಮಂತನು ಲಂಕೆಯನ್ನು ಸಮೀಪಿಸಿದನು. ಅಲ್ಲಿ ತರತರದ ಹೂಗಳಿದ್ದವು. ನೀರುಹಕ್ಕಿಗಳಿಂದ ಕೂಡಿದ ಸರೋವರಗಳಿದ್ದವು. ಹೂ ಹಣ್ಣು ಬಿಡುವ ಉದ್ಯಾನವನಗಳಿದ್ದವು. ಇವುಗಳನ್ನು ನೋಡುತ್ತ ಲಂಕೆಯ ಬಳಿಗೆ ಬಂದನು. ಅಲ್ಲಿ ಅನೇಕ ರಾಕ್ಷಸರು ಕಾವಲು ಕಾಯುತ್ತಿದ್ದರು. ಸುವರ್ಣಮಯವಾದ ದೊಡ್ಡ ಬಾಗಿಲುಗಳಿದ್ದವು. ವಿಶ್ವಕರ್ಮನು ಕಟ್ಟಿದ ಆ ಪಟ್ಟಣವು ಆಕಾಶದಲ್ಲಿ ತೇಲುತ್ತಿರುವಂತೆ ಭಾಸವಾಯಿತು. "ನಾನು ಈಗಿರುವ ರೂಪದಿಂದ ಪಟ್ಟಣಕ್ಕೆ ಹೋಗುವುದು ಸರಿಯಲ್ಲ. ರಾತ್ರಿಯಲ್ಲಿ ಲಂಕೆಯನ್ನು ಹೊಕ್ಕು ತನ್ನ ಕಾರ್ಯ ಸಾಧಿಸಬೇಕು " ಎಂದು ಹನುಮಂತನು ನಿರ್ಧರಿಸಿಕೊಂಡನು.

ಆದರೆ ದುರ್ಗಮವಾದ ಲಂಕಾನಗರವನ್ನು ನೋಡಿದಷ್ಟೂ ಚಿಂತೆ ಹೆಚ್ಚಾಗುತ್ತಿತ್ತು. ಸೀತೆಯನ್ನು ಹುಡುಕುವುದು ಹೇಗೆ ? ಎಂದು ಚಿಂತಿಸಿದನು. ತನ್ನ ರೂಪವನ್ನು ಸಣ್ಣದಾಗಿ ಮಾಡಿಕೊಂಡು ಪ್ರವೇಶಿಸುವುದೇ ಮೇಲೆಂದು ನಿರ್ಧರಿಸಿದನು. ಸೂರ್ಯನು ಮುಳುಗಿ ರಾತ್ರಿಯಾಯಿತು. ಹನುಮಂತನು ತನ್ನ ದೇಹವನ್ನು ಬೆಕ್ಕಿನ ಗಾತ್ರದಷ್ಟು ಚಿಕ್ಕದಾಗಿ ಮಾಡಿಕೊಂಡನು. ಆ ನಗರದ ಪ್ರಾಕಾರದ ಬಳಿಗೆ ಬಂದನು. ಬೆಳದಿಂಗಳು ಸುತ್ತೆಲ್ಲ ಹರಡಿತ್ತು. ಹನುಮಂತನ ಎದುರಿಗೆ ಲಂಕಾಧಿದೇವತೆ ಬಂದು ನಿಂತಳು."ಏಯ್ ಕೋತಿ, ಯಾರು ನೀನು ? ನಿನ್ನ ಪ್ರಾಣವನ್ನು ತೆಗೆದುಬಿಡುತ್ತೇನೆ. ನಿಜ ಹೇಳು ?" ಎಂದು ಗರ್ಜಿಸಿದಳು. ಆಗ ಹನುಮಂತನು "ನಿನ್ನ ಪ್ರಶ್ನೆಗೆ ಉತ್ತರ ಆಮೇಲೆ ಕೊಡುತ್ತೇನೆ, ಮೊದಲು ನೀನು ಯಾರು? ಏನಿದು ನಿನ್ನ ವಿಕಾರ ರೂಪ ?ನಗರ ದ್ವಾರದಲ್ಲಿ ಏಕೆ ನಿಂತಿರುವೆ "ಎಂದು ಕೇಳಿದನು. ಅವಳು"ನಾನು ಲಂಕಾಧಿದೇವತೆ. ಈ ನಗರವನ್ನು ಕಾಯುತ್ತಿದ್ದೇನೆ " ಎಂದು ಗದರಿದಳು. ಹನುಮಂತನು ಸ್ವಲ್ಪವೂ ಹೆದರಲಿಲ್ಲ. ಬೆಟ್ಟದಂತೆ ಕದಲದೆ ನಿಂತಿದ್ದನು. ಅವಳು ಹನುಮಂತನಿಗೆ ಒಂದು ಪೆಟ್ಟನ್ನು ಕೊಟ್ಟಳು. ಹನುಮಂತನಿಗೆ ಕೋಪ ಉಕ್ಕಿ ಬಂದಿತು. ತನ್ನ ಎಡಗೈ ಮುಷ್ಟಿಯಿಂದ ಅವಳನ್ನು ಗುದ್ದಿದನು. ಅವಳು

ಚೀರುತ್ತ ನೆಲಕ್ಕೆ ಬಿದ್ದಳು. ತೇಜಸ್ವಿಯಾದ ಆಂಜನೇಯ ಕೋಟೆಯ ಗೋಡೆಯನ್ನು ಹಾರಿ ಎಡಗಾಲನ್ನು ನೆಲದ ಮೇಲೆ ಊರಿದನು. ಸುಂದರವಾದ ನಗರವನ್ನು ಕಂಡು ಸಂತೋಷಪಟ್ಟನು. ಅಲ್ಲಿ ಕೆಲವರು ಜಪ ಮಾಡುತ್ತಿದ್ದರು, ಕೆಲವರು ರಾವಣನನ್ನು ಹೊಗಳಿ ಹಾಡುತ್ತಿದ್ದರು. ಕೆಲವರು ಶತ್ರುಗಳನ್ನು ಕೊಲ್ಲುವುದಕ್ಕಾಗಿ ಹೋಮ ಮಾಡುತ್ತಿದ್ದರು. ಇನ್ನೂ ಕೆಲವರು ಬಗೆ ಬಗೆಯ ಆಯುಧಗಳನ್ನು ಹಿಡಿದು ನಿಂತಿದ್ದರು. ಅಂಜನೇಯನು ಅವರನ್ನೆಲ್ಲ ನೋಡುತ್ತ ರಾವಣನ ಅಂತಃಪುರವಿರುವ ಮಹಾಸೌಧದ ಬಳಿಗೆ ಬಂದನು. ಅದಕ್ಕೆ ದೊಡ್ಡ ಬಾಗಿಲಿದ್ದಿತು. ಅದು ಸ್ವರ್ಗಲೋಕಕ್ಕೆ ಸಮಾನವಾಗಿತ್ತು.ಆ ಭವನದ ಪ್ರಾಕಾರದೊಳಕ್ಕೆ ಹನುಮಂತನು ಹೊಕ್ಕನು.

ಹನುಮಂತನು ರಾವಣನ ಅರಮನೆಗೆ ಬರುವಾಗ ಮಧ್ಯರಾತ್ರಿಯಾಗಿತ್ತು. ರಾಕ್ಷಸರು ವಿಹರಿಸುವ ಕಾಲ. ರಾತ್ರಿಯು ಎಲ್ಲರಿಗೂ ಸ್ವರ್ಗಸುಖವನ್ನು ತಂದು ಕೊಟ್ಟಿತ್ತು. ಅಂಜನೇಯನು ರಾಕ್ಷಸರನ್ನು ರಾಕ್ಷಸಿಯರನ್ನು, ನೋಡಿದನು. ಅಲ್ಲೆಲ್ಲೂ ಸೀತೆಯು ಕಣ್ಣಿಗೆ ಬೀಳಲಿಲ್ಲ. ಚಿಂತಾಮಗ್ನನಾದನು. ಅಲ್ಲಿ ರಾಜಚಿಹ್ನೆಗಳಾದ ಛತ್ರಚಾಮರಗಳು ಕಂಡು ಬಂದವು. ನಿತ್ಯಪೂಜೆಯಿಂದ, ಹೋಮಾಗ್ನಿಯಿಂದ ಅರಮನೆ ಉಜ್ವಲವಾಗಿತ್ತು. ಸುಂದರವಾದ ಅಂತಃಪುರವನ್ನು ನೋಡುತ್ತ "ಇದೇನು ಸ್ವರ್ಗಲೋಕವೋ ಅಮರಾವತಿಯೋ "ಎಂದು ಆಶ್ಚರ್ಯವಾಯಿತು. ಆದರೆ, ಅವನಿಗೆ ಸೀತೆ ಎಲ್ಲಿಯೂ ಕಾಣಲಿಲ್ಲ. ಸ್ವಲ್ಪ ಮುಂದಕ್ಕೆ ಹೋದಾಗ ಮಂಡೋದರಿ ಕಾಣಿಸಿದಳು. ಅವಳನ್ನು ಸೀತೆಯೆಂದು ಮೊದಲಿಗೆ ಭ್ರಮಿಸಿದನು. ಆಮೇಲೆ,ಇವಳು ಸೀತೆಯಲ್ಲ. ಶ್ರೀರಾಮನನ್ನು ಅಗಲಿ ಸೀತಾದೇವಿ ಹೀಗೆ ನಿದ್ದೆ ಮಾಡುವಳೆ ? ಇವಳು ಯಾರೋ ಬೇರೆಯವಳು " ಎಂದು ನಿಶ್ಚಯಿಸಿಕೊಂಡನು. ಹನುಮಂತನು ರಾವಣನ ಅಂತಃಪುರವನ್ನೆಲ್ಲ ಹುಡುಕಿದರೂ ಜಾನಕಿಯು ಕಾಣಲಿಲ್ಲ. ಅವನು ಹೊರಗೆ ಬಂದು, ಇತರ ಕಡೆಗಳಲ್ಲೂ ಹುಡುಕಲಾರಂಭಿಸಿದನು. ಆದರೆ ಅವನಿಗೆ ಸೀತೆ ಎಲ್ಲೂ ಸಿಗಲಿಲ್ಲ. ಅವನ ಮನಸ್ಸಿನ ತುಂಬ ಚಿಂತೆ ತುಂಬಿಕೊಂಡಿತು. ದೂರದಲ್ಲಿ ಅಶೋಕ ವನ ಕಾಣಿಸಿತು. ಅಲ್ಲಿಗೆ ನೇರವಾಗಿ ನೆಗೆದನು. ಆಗ ವಸಂತ ಋತುವಿನ ಕಾಲ. ಅವನು ಧುಮುಕಿದ ರಭಸಕ್ಕೆ ಗಿಡಮರಗಳು ಕದಲಿದವು. ನಿದ್ರಿಸುತ್ತಿದ್ದ ಹಕ್ಕಿಗಳು ಎಚ್ಚರಗೊಂಡು

ಹಾರಾಡಿದವು. ನಾನಾ ಬಣ್ಣದ ಹೂಗಳು ಚೆಲ್ಲಿದವು. ಆ ಹೂಗಳಿಂದ ಮುಚ್ಚಿಹೋದ ಹನುಮಂತನು ಹೂವಿನಿಂದ ಕೂಡಿದ ಬೆಟ್ಟದಂತೆ ಕಂಗೊಳಿಸಿದನು. ಒಂದು ಮರವನ್ನು ಹತ್ತಿ ಕುಳಿತು ಸುತ್ತಲೂ ನೋಡಿದನು. ಅವನ ಕಣ್ಣಿಗೆ ದೂರದಲ್ಲೊಂದು ದೊಡ್ಡ ಮನೆ ಕಾಣಿಸಿತು. ಹನುಮಂತನು ಅದನ್ನು ನೋಡುತ್ತಿರುವಾಗ ಅಶೋಕವೃಕ್ಷದ ಬುಡದಲ್ಲಿ ಒಬ್ಬ ಸ್ತ್ರೀಯನ್ನು ನೋಡಿದನು. ಅನೇಕ ರಾಕ್ಷಸ ಸ್ತ್ರೀಯರು ಸುತ್ತಲೂ ನೆರೆದಿದ್ದರು. ಅವಳು ಬಾರಿಬಾರಿಗೂ ನಿಟ್ಟುಸಿರು ಬಿಡುತ್ತಿದ್ದಳು. ಧಾರಾಕಾರವಾಗಿ ಅವಳ ಕಣ್ಣಿನಿಂದ ನೀರು ಸುರಿಯುತ್ತಿತ್ತು. ರಾಮನು ಹೇಳಿದಂತೆ ಅವಳ ಕಿವಿಗಳಲ್ಲಿ ಕರ್ಣಕುಂಡಲಗಳು ಇದ್ದವು. "ಆಕೆ ಸೀತೆಯೇ " ಎಂದು ನಿರ್ಧರಿಸಿಕೊಂಡನು. ರಾಮನನ್ನು ನೆನೆದುಕೊಂಡನು. ಸೀತೆಯನ್ನು ಕಂಡುದಕ್ಕಾಗಿ ಉಬ್ಬಿದನು.



ಅಶೋಕ ವನದಲ್ಲಿ ಸೀತೆ

ಬೆಳಗಾಯಿತು. ಸೀತೆಯನ್ನು ನೆನೆದು ಅವಳನ್ನು ನೋಡಲು ಹೊರಟನು. ದೂರದಲ್ಲಿ ರಾವಣ ಬರುತ್ತಿರುವುದು ಹನುಮಂತನಿಗೆ ಕಾಣಿಸಿತು. ಅವನು ಮರೆಯಾಗಿ ನಿಂತನು. ಸೀತೆಯ ಬಳಿಗೆ ಬಂದು " ನಾನು ನಿನ್ನನ್ನು ಕಾಮಿಸಿದ್ದೇನೆ. ಬೇರೆ ಹೆಂಗಸರನ್ನು ಹೊತ್ತುಕೊಂಡು ಬರುವುದು ರಾಕ್ಷಸರ ಧರ್ಮ. ನೀನು ನನ್ನವಳಾಗು. ಈ ದುಃಖವನ್ನು ಬಿಡು " ಎಂದನು ಆಗ ಸೀತೆಯು ರಾಮನನ್ನು ನೆನೆಯುತ್ತ ಒಂದು ಕಡ್ಡಿಯನ್ನು ಹಿಡಿದು ಉತ್ತರವಾಗಿ " ನನ್ನ ಮೇಲಿನ ಆಶೆ ಬಿಡು. ನಾನು ನಿನಗೆ ವಶವಾಗುವುದಿಲ್ಲ. ನನ್ನನ್ನು ರಾಮನಿಗೆ ಒಪ್ಪಿಸು. ನಿನಗೆ ಒಳ್ಳೆಯದಾಗುವುದು. ಇಲ್ಲದೆ ಹೋದರೆ ನೀನು ಸಾಯುವೆ"ಎಂದಳು. ರಾವಣನಿಗೆ ಕೋಪ ಉಕ್ಕಿತು. ರಾಕ್ಷಸಿಯರನ್ನು ಕರೆದು "ಏನಾದರೂ ಮಾಡಿ ಇವಳು ನನ್ನ ವಶವಾಗುವಂತೆ ಮಾಡಿ " ಎಂದನು. ರಾವಣನು ಅತ್ತ ಹೋದ ಮೇಲೆ ಇತ್ತ ರಾಕ್ಷಸ ಸ್ತ್ರೀಯರು ಸೀತೆಗೆ ತುಂಬ ಕಿರುಕುಳ ಕೊಟ್ಟರು. ಆದರೆ, ಅವರಲ್ಲಿದ್ದ ತ್ರಿಜಟೆ ಎಂಬ ಮುದುಕಿಯು ಅವರನ್ನು ಗದರಿಸಿಕೊಂಡು ಸುಮ್ಮನಿರಿಸಿದಳು.

ಹನುಮಂತನು ಮರದ ಮೇಲೆ ಕುಳಿತು ಇದನ್ನೆಲ್ಲ ನೋಡಿದನು. ಸೀತೆಯನ್ನು ಹೇಗಾದರೂ ಸಮಾಧಾನ ಪಡಿಸಬೇಕು. ಅವಳಿಗೆ ರಾಮನ ವಂಶದ ಚರಿತ್ರೆಯನ್ನು ಹೇಳಿದರೆ ವಿಶ್ವಾಸ ಹುಟ್ಟುತ್ತದೆಂದು ಭಾವಿಸಿ ರಾಮನ ಕಥೆಯನ್ನು ಹಾಡಲು ಆರಂಭಿಸಿದನು. ಮುಖ ತಗ್ಗಿಸಿ ಕುಳಿತಿದ್ದ ಸೀತೆ ತಲೆಯೆತ್ತಿದಳು. ಸ್ವಲ್ಪ ದೂರದಲ್ಲಿ ಶಿಂಶುಪಾ ವೃಕ್ಷದ ಮೇಲೆ ಕುಳಿತಿದ್ದ ಹನುಮಂತನನ್ನು ನೋಡಿದಳು. ಅವನು ಮರದಿಂದ ಕೆಳಗೆ ಇಳಿದು ಬಂದು ನಮಸ್ಕಾರ ಮಾಡಿ, ಮಧುರವಾದ ಮಾತುಗಳಿಂದ ರಾಮನನ್ನು ಸ್ತುತಿಸಿದನು. ತಾನು ರಾಮನ ಅಪ್ಪಣೆಯಂತೆ ಸೀತೆಯನ್ನು ಹುಡುಕಲು ಬಂದ ವಿಷಯವನ್ನು ತಿಳಿಸಿದನು. ಸೀತೆಗೆ ಹನುಮಂತನ ಮಾತಿನಲ್ಲಿ ನಂಬಿಕೆ ಹುಟ್ಟಿತು. ಅವಳು ಚೂಡಾಮಣಿಯನ್ನು ತೆಗೆದು "ಇದನ್ನು ರಾಮನಿಗೆ ಕೊಡು" ಎಂದು ಕೊಟ್ಟಳು. ಹನುಮಂತನು ಅದನ್ನು ತೆಗೆದುಕೊಂಡು ಸೀತೆಗೆ ನಮಸ್ಕಾರ ಮಾಡಿದನು.

ಹನುಮಂತನಿಗೆ ತಾನು ಮಾಡಿದ ಕೆಲಸ ಪೂರ್ಣವಾಗಲಿಲ್ಲ ಎನಿಸಿತು. "ರಾವಣನ ಬಲವೆಷ್ಟು ಎಂಬುದನ್ನು ತಿಳಿಯಲಿಲ್ಲ. ಈ ವನವನ್ನು ಮುರಿದರೆ, ರಾವಣ ಕೋಪಗೊಂಡು

ಸೇನೆಯನ್ನು ಕಳುಹಿಸುತ್ತಾನೆ. ಅವನೊಡನೆ ಹೋರಾಡಿ ಬಲಾಬಲಗಳನ್ನು ತಿಳಿದು ಹಿಂದಿರುಗುವೆನು " ಎಂದು ನಿಶ್ಚಯಮಾಡಿಕೊಂಡು ಪ್ರಮದ ವನವನ್ನು ಮುರಿದನು. ಈ ವಿಷಯ ರಾವಣನಿಗೆ ತಿಳಿಯಿತು. ಅವನು ಎಂಬತ್ತು ಸಾವಿರ ರಾಕ್ಷಸರನ್ನು ಕಳುಹಿಸಿದನು. ಅವರನ್ನೆಲ್ಲ ಆಂಜನೇಯನು ಕೊಂದು ಹಾಕಿದನು. ಪ್ರಹಸ್ತನ ಮಗನಾದ ಜಂಬುಮಾಲಿಯನ್ನು ಕಳುಹಿಸಿದನು. ಹನುಮಂತನು ಅವನನ್ನೂ ಕೊಂದು ಹಾಕಿದನು. ಕೊನೆಗೆ ರಾವಣ ತನ್ನ ಮಗನಾದ ಅಕ್ಷಕುಮಾರನನ್ನು ಕಳುಹಿಸಿದನು. ಅವನು ಹನುಮಂತನ ಪರಾಕ್ರಮ, ವೇಗವನ್ನು ತಿಳಿದು ಅದಕ್ಕೆ ತಕ್ಕಂತೆ ಯುದ್ಧ ಮಾಡುತ್ತ ಬಂದನು. ಅವರಿಬ್ಬರ ಯುದ್ಧವನ್ನು ಕಂಡು ಆಶ್ಚರ್ಯಪಟ್ಟು ಸೂರ್ಯನು ಸುಡಲಿಲ್ಲ. ಗಾಳಿಯು ಬೀಸಲಿಲ್ಲ. ಪರ್ವತಗಳು ಅಲ್ಲಾಡಿದವು. ಅಂತರಿಕ್ಷವು ಮೊಳಗಿತು. ಸಾಗರವು ಕಲಕಿಹೋಯಿತು. ಕೊನೆಗೆ ಹನುಮಂತನು ಅಕ್ಷಕುಮಾರನನ್ನು ಬಗೆದು ಹಾಕಿ ತೋರಣದ ಕಂಭದ ಮೇಲೆ ಕುಳಿತನು. ಅದನ್ನು ಕೇಳಿ ರಾವಣನಿಗೆ ಕೋಪ ಉಕ್ಕಿಬಂದಿತು. ತನ್ನ ಮಗನಾದ ಇಂದ್ರಜಿತ್ತನ್ನು ಕರೆದು ಹನುಮಂತನನ್ನು ಬ್ರಹ್ಮಾಸ್ತ್ರದಿಂದ ಕಟ್ಟಿಹಾಕಲು ತಿಳಿಸಿದನು. ಇಂದ್ರಜಿತು ಪ್ರಯೋಗಿಸಿದ ಬ್ರಹ್ಮಾಸ್ತ್ರವು ಮಾರುತಿಯನ್ನು ಕಟ್ಟಿ ಕೆಡವಿತು. ಅವನನ್ನು ರಾವಣನ ಬಳಿಗೆ ತಂದರು. ರಾವಣನಿಗೆ ಇವನು ತನ್ನ ವೈರಿಯೆಂದು ತಿಳಿಯಿತು. ರಾಮನು ಸೀತೆಯನ್ನು ಹುಡುಕುತ್ತಿರುವು ತಿಳಿಯಿತು.

ರಾಮನು ತನ್ನ ಮೇಲೆ ಯುದ್ಧಕ್ಕೆ ಬರುವುದನ್ನು ತಿಳಿದ ಮೇಲೆ ರಾವಣನಿಗೆ ಕೋಪ ಬಂತು. "ಈ ಕಪಿಯನ್ನು ಕೊಂದು ಬಿಡಿ " ಎಂದಾಗ ವಿಭೀಷಣನು ""ಅವನನ್ನು ಕೊಲ್ಲುವುದು ಬೇಡ " ಎಂದು ತಡೆ ಹಿಡಿದನು. ಆಗ ರಾವಣ "ಕಪಿಗಳಿಗೆ ಬಾಲವೇ ಭೂಷಣ. ಅದನ್ನು ಸುಟ್ಟುಬಿಡಿ " ಎಂದು ಹೇಳಿದನು. ಮಾರುತಿಯ ಬಾಲಕ್ಕೆ ರಾಕ್ಷಸರು ಬಟ್ಟೆ ಸುತ್ತಿದರು. ಎಣ್ಣೆ ಹುಯ್ದು ಬೆಂಕಿ ಹತ್ತಿಸಿದರು. ಉರಿಯುತ್ತಿರುವ ಬಾಲದ ಕಪಿಯನ್ನು, ಲಂಕೆಯಲ್ಲಿ ಬೀದಿಬೀದಿಯಲ್ಲೂ ಸುತ್ತಿಸಿದರು. ಆಂಜನೇಯನು ಕೊನೆಗೆ ತನ್ನನ್ನು ಕಟ್ಟಿದ್ದ ಕಟ್ಟುಗಳನ್ನೆಲ್ಲ ಹರಿದು ಹಾಕಿದನು. ಊರ ಬಾಗಿಲಲ್ಲಿದ್ದ ಕಂಭವನ್ನು ಎಳೆದುಕೊಂಡು, ಕಾವಲಿಗೆಂದು ಬಂದಿದ್ದವರನ್ನು ಹೊಡೆದು ಮುಗಿಸಿದನು. ಆಮೇಲೆ

ಮನೆಯಿಂದ ಮನೆಗೆ ಹಾರುತ್ತ, ಮನೆಮನೆಗೂ ಬೆಂಕಿಯಿಟ್ಟನು. ಲಂಕೆಯೆಲ್ಲವೂ ಬೆಂಕಿಯ ಪಾಲಾಯಿತು. ಆದರೆ ಸೀತೆ ಮತ್ತು ವಿಭೀಷಣರಿದ್ದ ಜಾಗವು ಸುರಕ್ಷಿತವಾಗಿತ್ತು. ಹನುಮಂತನು ಅಶೋಕ ವನಕ್ಕೆ ಹೋಗಿ ಸೀತೆಯ ದರ್ಶನ ಮಾಡಿ "ರಾಮನು ಬೇಗ ಬರುವನು. ಶತ್ರುಗಳನ್ನು ಯುದ್ಧದಲ್ಲಿ ಗೆದ್ದು, ನಿನ್ನ ಶೋಕವನ್ನು ತೀರಿಸುವನು " ಎಂದು ನಂಬಿಕೆ ಹೇಳಿ ಆಕೆಗೆ ನಮಸ್ಕಾರ ಮಾಡಿ ಹಿಂದಿರುಗಿದನು. ತ್ರಿಕೂಟಾಚಲವನ್ನು ಹತ್ತಿ ಬೆಟ್ಟದಂತೆ ಬೆಳೆದು ಅಲ್ಲಿಂದ ಹಾರಿ ಮಹೇಂದ್ರಪರ್ವತಕ್ಕೆ ಬಂದನು. ವಾಯುಪುತ್ರನ ಹಾದಿಯನ್ನು ನೋಡುತ್ತ ಕುಳಿತಿದ್ದ ವಾನರ ವೀರರು ಆಂಜನೇಯನನ್ನು ಸಂತಸದಿಂದ ಸ್ವಾಗತಿಸಿದರು. ಹನುಮಂತನು ವಾನರ ವೀರರಿಗೆ ಸೀತೆಯ ವೃತ್ತಾಂತವನ್ನು ತಿಳಿಸಿದನು. ಅವರೆಲ್ಲರೂ ಆಂಜನೇಯನನ್ನು ಕೂಡಿಕೊಂಡು ರಾಮನ ಬಳಿಗೆ ಬಂದರು. ರಾಮನ ಕೈಗೆ ಚೂಡಾಮಣಿಯನ್ನು ಕೊಟ್ಟು ಸೀತೆಯ ವಿಚಾರವನ್ನು ತಿಳಿಸಿದನು. ತನಗೂ ಆಕೆಗೂ ನಡೆದ ಮಾತುಕತೆಗಳನ್ನು ಹೇಳಿದನು. ಸಮುದ್ರದ ಆಚೆಗೆ ಇರುವ ಲಂಕೆಯ ವಿಷಯ ತಿಳಿದ ರಾಮನು ಅದನ್ನು ದಾಟುವ ಬಗೆ ಹೇಗೆ ಎಂದು ಚಿಂತಿಸಿದನು. ಸುಗ್ರೀವನು "ಅದನ್ನು ಹೇಗಾದರೂ ದಾಟಿ ಸೀತೆಯನ್ನು ಕರೆದು ತರೋಣ " ಎಂದು ಹೇಳಿ, ಸೈನ್ಯವನ್ನು ಕರೆದುಕೊಂಡು ಸಮುದ್ರದ ಬಳಿಗೆ ಬಂದನು. ಸಮುದ್ರದ ತೀರದಲ್ಲಿ ರಾಮಲಕ್ಷ್ಮಣರು ಇದನ್ನು ದಾಟುವ ಬಗೆ ಹೇಗೆ ಎಂದು ಯೋಚಿಸಿದರು.

ಇತ್ತ ಲಂಕೆಯಲ್ಲಿ ಅಲ್ಲೋಲಕಲ್ಲೋಲ ಆಯಿತು. ಕಪಿಯು ಮಾಡಿದ ಕೆಲಸದಿಂದ ರಾವಣನಿಗೆ ತುಂಬ ಕೋಪ ಬಂತು. ಇದೆಲ್ಲ ಸೀತೆಯಿಂದ ಆದದ್ದು ಎಂದು ಅನಿಸಿ ಸೀತೆಯನ್ನು ಕೊಲ್ಲಬೇಕೆಂಬ ಮನಸ್ಸಾಯಿತು. ಆಗ ಮಂಡೋದರಿ ಸಮಾಧಾನ ಹೇಳಿದಳು. ವಿಭೀಷಣನು ರಾವಣನ ಅಂತಃಪುರಕ್ಕೆ ಬಂದು "ಸೀತೆಯನ್ನು ರಾಮನಿಗೆ ಒಪ್ಪಿಸು" ಎಂದು ಹೇಳಿದನು. ಅವನ ಮಾತುಗಳನ್ನು ರಾವಣನು ಕೇಳಲಿಲ್ಲ. ವಿಭೀಷಣನ ಮಾತುಗಳು ಮಂತ್ರಿಗೂ ಕಹಿ ಎನಿಸಿತು. ಇಂದ್ರಜಿತ್ತುವು "ತಂದೆ ರಾವಣನು ಮಾಡಿರುವ ಕೆಲಸ ಸರಿ" ಎಂದು ವಾದಿಸಿದನು. ವಿಭೀಷಣನ ಮಾತುಗಳನ್ನು ರಾವಣನು ಕೇಳದೆ ಹೋದನು.

ವಿಭೀಷಣನಿಗೆ ಕೋಪ ಬಂದಿತು. ಅವನು ತನ್ನ ನಾಲ್ವರು ಮಂತ್ರಿಗಳೊಡನೆ ಆಕಾಶಕ್ಕೆ ಹಾರಿ ರಾಮ ಶಿಬಿರಕ್ಕೆ ಬಂದುಬಿಟ್ಟನು.

ವಿಭೀಷಣನು ಶ್ರೀರಾಮನ ಬಳಿಗೆ ಬಂದನು. ಅವನು "ನಾನು ವಿಭೀಷಣ. ರಾಮನಿಗೆ ಶರಣಾಗಿ ಬಂದಿರುವೆ" ಎಂದು ಸುಗ್ರೀವನಿಗೆ ತಿಳಿಸಿದನು. ಈ ವಿಚಾರಗಳನ್ನು ತಿಳಿದ ಶ್ರೀರಾಮ, ಆಂಜನೇಯನ ಮಾತಿನಂತೆ ವಿಭೀಷಣನನ್ನು ತನ್ನ ಗುಂಪಿಗೆ ಸೇರಿಸಿಕೊಂಡನು. ಆಗ ವಿಭೀಷಣ ರಾಮನಿಗೆ ನಮಸ್ಕಾರ ಮಾಡಿ " ರಾಕ್ಷಸರನ್ನು ಕೊಂದು ಲಂಕೆಯನ್ನು ಗೆಲ್ಲುವುದರಲ್ಲಿ ತನ್ನ ಪ್ರಾಣವಿರುವವರೆಗೂ ಸಹಾಯ ಮಾಡುವೆ " ಎಂದನು. ರಾಮನು ವಾನರ ವೀರರನ್ನು ಕರೆದು ಅವರ ಸಮ್ಮುಖದಲ್ಲಿ ವಿಭೀಷಣನಿಗೆ ಅಭಿಷೇಕ ಮಾಡಿದನು. ವಿಭೀಷಣನ ಮಾತಿನಂತೆ ಸಮುದ್ರ ರಾಜನಿಗೆ ಶರಣು ಹೋದನು. ದರ್ಭೆಯನ್ನು ಹಾಸಿ ಆ ರಾತ್ರಿ ಸಮುದ್ರ ರಾಜನನ್ನು ಕುರಿತು ಪ್ರಾರ್ಥಿಸಿದನು.

ಸಮುದ್ರದ ಬಳಿ ದರ್ಭೆ ಹಾಸಿಕೊಂಡು ಮಲಗಿದ್ದ ರಾಮನಿಗೆ ಸಮುದ್ರ ರಾಜನು ಒಲಿಯಲಿಲ್ಲ. ಮೂರುದಿನ ಕಳೆಯಿತು. ಆಗ ರಾಮನಿಗೆ ಕೋಪ ಬಂದಿತು. ಬಿಲ್ಲನ್ನು ಹಿಡಿದು ಬಾಣವನ್ನು ತೊಟ್ಟನು. ಆಗ ಸಮುದ್ರ ಮಧ್ಯದಿಂದ ಸಾಗರನು ಎದ್ದು ಬಂದನು. ಕೈಮುಗಿದುಕೊಂಡು "ನಿನ್ನಲ್ಲಿ ನಲನೆಂಬ ಕಪಿವೀರನಿದ್ದಾನೆ. ಅವನು ವಿಶ್ವಕರ್ಮನ ಮಗ. ಅವನು ಸೇತುವೆಯನ್ನು ಕಟ್ಟಲಿ. ಅದನ್ನು ನಾನು ಒಪ್ಪಿಕೊಳ್ಳುವೆನು " ಎಂದು ರಾಮನಿಗೆ ಹೇಳಿದನು. ರಾಮನು ನಲನನ್ನು ಕರೆಸಿದನು. "ಸೇತುವನ್ನು ಕಟ್ಟು " ಎಂದನು. ಕಪಿವೀರರೆಲ್ಲ ಅವನಿಗೆ ಸಹಾಯಕರಾಗಿ ನಿಂತರು. ಅವರು ಬೆಟ್ಟಗಳನ್ನು, ಮರಗಳನ್ನು ಎಲ್ಲೆಲ್ಲಿಂದಲೋ ತಂದು ಒಟ್ಟಿದರು. ಸೇತುವೆ ಕೆಲಸ ಐದು ದಿನಗಳಲ್ಲಿ ಮುಗಿಯಿತು. ಆ ನಲಸೇತುವನ್ನು ಕಂಡು ಎಲ್ಲರೂ ಆಶ್ಚರ್ಯಪಟ್ಟರು. ಸೇತುವೆ ಸಾಗರದ ಬೈತಲೆಯೋ ಎಂಬಂತೆ ಕಾಣಿಸಿತು. ಸೈನ್ಯವೆಲ್ಲವೂ ಸೇತುವೆಯನ್ನು ದಾಟಿಕೊಂಡು ಲಂಕೆಯ ಬಳಿಗೆ ಬಂದಿತು. ರಾಮನು ಸಾಗರವನ್ನು ದಾಟಿ ಲಂಕೆಯ ಬಳಿಗೆ ಬಂದನೆಂಬ ಸುದ್ದಿ ರಾವಣನಿಗೆ ತಿಳಿಯಿತು. ಅವನು ಲಂಕೆಯ ನಾಲ್ಕು ದಿಕ್ಕುಗಳಲ್ಲಿಯೂ ಬಲಿಷ್ಠರಾದ ರಾಕ್ಷಸ ನಾಯಕರನ್ನು ಕಾವಲಿಗಿಟ್ಟನು. ಇತ್ತ ರಾಮನು ವಿಭೀಷಣನ ಮಾತಿನಂತೆ ರಾಜಧರ್ಮವನ್ನು ಅನುಸರಿಸಿ

ಅಂಗದನನ್ನು ರಾವಣನ ಬಳಿಗೆ ದೂತನಾಗಿ ಕಳುಹಿಸಿದನು. ಆದರೆ, ರಾವಣನು ಅಂಗದನ ಮಾತನ್ನು ಒಪ್ಪಿಕೊಳ್ಳಲಿಲ್ಲ. ಆಮೇಲೆ ಕಪಿಸೈನ್ಯ ಲಂಕೆಯನ್ನು ಮುತ್ತಿತು. ಕಪಿಗಳಿಗೂ ರಾಕ್ಷಸರಿಗೂ ಭಯಂಕರ ಯುದ್ಧವಾಯಿತು. ಆ ಯುದ್ಧದಲ್ಲಿ ರಕ್ತ ನದಿಗಳು ಹರಿದವು. ಸತ್ತವರೂ ಸಾಯುತ್ತಿರುವವರೂ ಎಲ್ಲೆಲ್ಲೂ ತುಂಬಿಹೋದರು. ಆ ರಾತ್ರಿ ಇಂದ್ರಜಿತುವಿಗೂ ಅಂಗದನಿಗೂ ದೊಡ್ಡ ಯುದ್ಧ ನಡೆಯಿತು. ರಾಮಲಕ್ಷ್ಮಣರಿಗೂ ಪೆಟ್ಟಾಯಿತು. ಇಂದ್ರಜಿತು ಹೆಮ್ಮೆಯಿಂದ ಬೀಗುತ್ತ ಲಂಕಾಪಟ್ಟಣಕ್ಕೆ ಹಿಂದಿರುಗಿದನು.

ಮರುದಿನ ರಾವಣನು ವಜ್ರದುಷ್ಟ ಹಾಗೂ ಕಂಪನರೆಂಬ ರಾಕ್ಷಸರನ್ನು ಯುದ್ಧಕ್ಕೆ ಕಳುಹಿಸಿದನು. ಅವರಿಬ್ಬರೂ ಯುದ್ಧದಲ್ಲಿ ಸತ್ತರು. ಆಗ ರಾಕ್ಷಸ ಸೇನಾಪತಿ ಪ್ರಹಸ್ತನೇ ಹೊರಟನು. ಅವನು ನೀಲನಿಂದ ಹತನಾದನು. ಈ ಸುದ್ದಿ ಕೇಳಿ ರಾವಣನಿಗೆ ಸುಮ್ಮನೆ ಇರಲು ಆಗಲಿಲ್ಲ. ಬೆಂಕಿಯಂತೆ ಬೆಳಗುತ್ತಿರುವ ರಥವನ್ನು ಹತ್ತಿದನು. ಯುದ್ಧವಾದ್ಯಗಳು ಮೊಳಗಿದವು. ರಾಕ್ಷಸರು ಮಂಗಳಸ್ತೋತ್ರಗಳನ್ನು ಹಾಡಿದರು. ಅವನ ಸೇನೆಯು ಮಹಾಸಾಗರದಂತೆ ಅವನ ಜೊತೆಯಲ್ಲಿ ಹೊರಟಿತು.

ರಾವಣನು ತಿಮಿಂಗಿಲವು ಸಾಗರದಲ್ಲಿ ನುಗ್ಗುವ ಹಾಗೆ ವಾನರ ಸೈನ್ಯದೊಳಕ್ಕೆ ನುಗ್ಗಿದನು. ಆಂಜನೇಯ, ಸುಗ್ರೀವ, ನೀಲರ ಜತೆ ಯುದ್ಧ ಮಾಡಿದನು. ಆಮೇಲೆ ಲಕ್ಷ್ಮಣನನ್ನು ಕಂಡು ಅವನ ಮೇಲೆ ಬ್ರಹ್ಮನು ಕೊಟ್ಟಿದ್ದ ಶಕ್ತಿಯನ್ನು ಉಪಯೋಗಿಸಿದನು. ಅದು ಧಗಧಗನೆ ಉರಿಯುತ್ತ ಬಂದು ಸೌಮಿತ್ರಿಯ ಎದೆಗೆ ನಾಟಿತು. ರಾವಣನು ಅವನನ್ನು ಹೊತ್ತುಕೊಂಡು ಹೋಗಲು ಪ್ರಯತ್ನಿಸಿದನು. ಆದರೆ ಅದು ಸಾಧ್ಯವಾಗಲಿಲ್ಲ. ಆಗ ಆಂಜನೇಯ ಬಂದು ಲಂಕೇಶನನ್ನು ಅಪ್ಪಳಿಸಿದನು. ಅವನ ಹೊಡೆತಕ್ಕೆ ಕಣ್ಣು, ಕಿವಿ, ಬಾಯಿಗಳಿಂದ ರಕ್ತ ಕಾರುತ್ತ ರಾವಣನು ಬಿದ್ದು ಹೋದನು. ಸ್ವಲ್ಪ ಹೊತ್ತಿಗೆ ಎಚ್ಚರಗೊಂಡು ಬಿಲ್ಲನ್ನು ಹಿಡಿದು ನೂರಾರು ಬಾಣಗಳನ್ನು ಕಪಿಸೈನ್ಯದ ಮೇಲೆ ಬಿಟ್ಟನು. ಆಗ ರಾಮನು ಆಂಜನೇಯನ ಹೆಗಲ ಮೇಲೆ ಕುಳಿತು ರಾವಣನ ಮೇಲೆ ಬಾಣದ ಮಳೆಯನ್ನು ಸುರಿಸಿದನು. ರಾವಣನ ಕುದುರೆ, ಧ್ವಜ, ಛತ್ರ, ಸಾರಥಿ, ಆಯುಧಗಳನ್ನು ತುಂಡು ತುಂಡು ಮಾಡಿದನು. ರಾವಣನು ರಾಮಬಾಣದ ಏಟನ್ನು ತಡೆಯಲಾರದೆ ಮೂರ್ಛೆ

ಹೋದನು. ಅವನ ಕೈಯಲ್ಲಿದ್ದ ಬಿಲ್ಲು ಬಿದ್ದು ಹೋಯಿತು. ರಾವಣನು ಎಚ್ಚೆತ್ತು ಸಿಂಹದಿಂದ ಏಟು ತಿಂದ ಆನೆಯಂತೆ ಲಂಕಾಪುರಕ್ಕೆ ಮರಳಿದನು. ತನಗಾದ ಅವಮಾನಕ್ಕೆ ತಳಮಳಿಸಿದನು. ಕುಂಭಕರ್ಣನನ್ನು ಎಬ್ಬಿಸಲು ಹೇಳಿದನು. ರಾಕ್ಷಸರೆಲ್ಲ ಸೇರಿ ಕುಂಭಕರ್ಣನನ್ನು ಬಹುಕಷ್ಟದಿಂದ ಎಬ್ಬಿಸಿದರು. ಅವನು ಬೆಟ್ಟದಂತಿರುವ ಮೈಯನ್ನು ಹೊತ್ತು ರಾವಣನ ಸಭೆಗೆ ಬಂದನು. ರಾವಣನು ತಮ್ಮನನ್ನು ಆಲಂಗಿಸಿಕೊಂಡು ನಡೆದ ಸಂಗತಿಯನ್ನು ತಿಳಿಸಿದನು.

ಕುಂಭಕರ್ಣನು ಯುದ್ಧಭೂಮಿಗೆ ಬಂದನು. ಆ ರಾಕ್ಷಸನನ್ನು ನೋಡಿದ ಕಪಿನಾಯಕರು ಓಟಕಿತ್ತರು. ಅಂಗದನು ಅವರನ್ನೆಲ್ಲ ಕರೆದು ಧೈರ್ಯ ತುಂಬಿದನು. ಅವರೆಲ್ಲ ಕುಂಭಕರ್ಣನ ಮೇಲೆ ಬಿದ್ದು ಯುದ್ಧಮಾಡಿದರು. ಕುಂಭಕರ್ಣನು ರೇಗಿ ಗದೆಯನ್ನೆತ್ತಿಕೊಂಡು ಅವರ ಮೇಲೆ ಬಿದ್ದನು. ಕುಂಭಕರ್ಣನ ಒಂದೊಂದೇಟಿಗೆ ಏಳೆಂಟು ಸಾವಿರ ಕಪಿಗಳು ಸಾಯುತ್ತ ಬಂದರು. ಒಮ್ಮೆ ಕೈ ಹಾಕಿ ಹತ್ತಿಪ್ಪತ್ತು ವಾನರರನ್ನು ಹಿಡಿದು ತಿನ್ನುತ್ತ ಬಂದನು. ಅಂಗದ, ಸುಗ್ರೀವ, ಲಕ್ಷ್ಮಣರ ಮೇಲೆ ಯುದ್ಧ ಮಾಡಿದನು. ಅವರನ್ನೆಲ್ಲ ಗಾಯಪಡಿಸುತ್ತ ಹೊರಟನು. ರಾಮ ಅವನ ಎದುರಿಗೆ ಬಂದು ಅನೇಕ ಬಾಣಗಳನ್ನು ಬಿಟ್ಟನು. ಅವನು ಬಿಟ್ಟಬಾಣಕ್ಕೆ ಪ್ರತಿಯಾಗಿ ಕುಂಭಕರ್ಣ ಗದೆಯಿಂದ ಕಪಿವೀರರನ್ನು ಸವರುತ್ತ ಹೊರಟನು. ರಾಮನು ಇಂದ್ರಾಸ್ತ್ರ ಪ್ರಯೋಗಿಸಿ ಅವನ ಕೈಗಳನ್ನು ಹಾರಿಸಿದನು. ಅರ್ಧಚಂದ್ರ ಬಾಣದಿಂದ ಪಾದಗಳನ್ನು ಕತ್ತರಿಸಿದನು. ಕೊನೆಗೆ ಮತ್ತೆ ಇಂದ್ರಾಸ್ತ್ರವನ್ನು ಉಪಯೋಗಿಸಿ ರಾಕ್ಷಸೇಂದ್ರನ ತಲೆಯನ್ನು ಕತ್ತರಿಸಿದನು. ಅವನ ತಲೆಯು ಹೋಗಿ ಲಂಕೆಯಲ್ಲಿ ಬಿದ್ದು ಎಷ್ಟೋ ಮನೆಗಳು ಮುರಿದವು. ದೇಹವು ಸಾಗರದಲ್ಲಿ ಬಿದ್ದು ಎಷ್ಟೋ ಜಲಚರಗಳನ್ನು ಕೊಂದಿತು. ದೇವತೆಗಳೂ ಕಪಿವೀರರೂ ಅವನ ಸಾವಿನಿಂದ ಸಂತೋಷಗೊಂಡರು.

ಕುಂಭಕರ್ಣನು ಸತ್ತು ಹೋದುದನ್ನು ತಿಳಿದು ರಾವಣನು ಶೋಕದಿಂದ ಬೆಂದು ಮೂರ್ಛೆ ಹೋದನು. ಆಮೇಲೆ ರಾವಣನ ಮಗನಾದ ಅತಿಕಾಯನು ಯುದ್ಧಕ್ಕೆ ಹೊರಟನು. ಅವನೂ ಸಂಗ್ರಾಮದಲ್ಲಿ ಸತ್ತನು. ಇದನ್ನು ಕೇಳಿ ಇಂದ್ರಜಿತುವು ತಂದೆಯ ಬಳಿಗೆ ಹೋಗಿ

ಅವನ ಅಪ್ಪಣೆ ಪಡೆದು ಯುದ್ಧರಂಗಕ್ಕೆ ಬಂದನು. ಅವನು ನಡೆಸಿದ ಯುದ್ಧ ಭಯಂಕರವಾಗಿತ್ತು. ಅನೇಕ ರೀತಿಯ ಮಾಯಾಯುದ್ಧಗಳನ್ನು ಮಾಡಿದನು. ಅವನು ಕೊನೆಗೆ ಲಕ್ಷ್ಮಣನಿಂದ ಮರಣ ಹೊಂದಿದನು.


ಮಗನ ಮರಣದ ಸುದ್ದಿ ರಾವಣನ ಕಿವಿಗೆ ಬಿತ್ತು. ಅವನು ಮಗನನ್ನು ಕಳೆದುಕೊಂಡ ದುಃಖದಿಂದ ನೆಲದ ಮೇಲೆ ಹೊರಳಾಡಿದನು. ತನ್ನವರನ್ನೆಲ್ಲ ಕಳೆದುಕೊಂಡ ನೆನಪು ಬಂದಿತು. ಅವನಿಗೆ ಮುಂದೇನು ಮಾಡಬೇಕೆಂದು ತಿಳಿಯದೆ ಹೋಯಿತು. ಧೈರ್ಯವನ್ನು ಕೂಡಿಸಿಕೊಂಡು ರಾವಣನು ಅಳಿದುಳಿದ ಸೈನ್ಯವನ್ನು ಕಟ್ಟಿಕೊಂಡು ಯುದ್ಧಭೂಮಿಗೆ ಬಂದನು.



ರಾವಣನ ಮರಣ

ರಾಮನಿಗೂ ರಾವಣನಿಗೂ ಭಯಂಕರವಾದ ಯುದ್ಧ ನಡೆಯಿತು. ಇಂತಹ ಒಂದು ಯುದ್ಧವು ಹಿಂದೆ ನಡೆದಿರಲಿಲ್ಲ, ಮುಂದೆ ನಡೆಯುವುದಿಲ್ಲ, ಎಂಬಷ್ಟು ಘೋರ ಯುದ್ಧ ಆಯಿತು. ರಾಮನು ನೆಲದ ಮೇಲೆ ನಿಂತು ಯುದ್ಧ ಮಾಡುತ್ತಿದ್ದನು. ಅದನ್ನು ನೋಡಿದ ಇಂದ್ರನು ತನ್ನ ದಿವ್ಯರಥವನ್ನು ರಾಮನ ಬಳಿಗೆ ಕಳುಹಿಸಿದನು. ರಾಮನು ದಿವ್ಯರಥವನ್ನು ಏರಿದನು. ರಾವಣನ ಮೇಲೆ ಅನೇಕ ಬಗೆಯ ಬಾಣಗಳನ್ನು ಬಿಟ್ಟನು. ರಾವಣನೂ ಅದಕ್ಕೆ ಪ್ರತಿಯಾಗಿ ಬಾಣಗಳನ್ನು ಬಿಟ್ಟನು. ರಾಮ ರಾವಣರ ಯುದ್ಧ ನಡೆಯುತ್ತಲೇ ಇತ್ತು. ಈ ಮಧ್ಯೆ ಅಗಸ್ತ್ಯರು ಬಂದು ರಾಮನಿಗೆ "ಆದಿತ್ಯ ಹೃದಯ " ವನ್ನು ಉಪದೇಶಿಸಿದರು. ಆದರಿಂದ ರಾಮನಿಗೆ ಅಪೂರ್ವ ತೇಜಸ್ಸು ಬಂದಿತು. ರಾವಣನ ಮೇಲೆ ಸಾವಿರಾರು ಬಾಣಗಳನ್ನು ಪ್ರಯೋಗಿಸಿದನು. ಪ್ರತಿಯಾಗಿ ರಾವಣನು ಮಾಯೆಯಿಂದ ನೂರಾರು ಬಾಣಗಳನ್ನು ಸೃಷ್ಟಿಸಿದನು. ಹೀಗೆ ರಾಮ ರಾವಣರ ಬಾಣಗಳಿಂದ ಆಕಾಶವೆಲ್ಲ ತುಂಬಿ ಹೋಯಿತು. ಇಂದ್ರನ ಸಾರಥಿಯಾದ ಮಾತಲಿಯ ಮಾತಿನಂತೆ ರಾಮನು ಬ್ರಹ್ಮಾಸ್ತ್ರವನ್ನು ತೆಗೆದು ಪ್ರಯೋಗಿಸಿದನು. ಅದು ರಾವಣನ ಎದೆಯನ್ನು ಪ್ರವೇಶಿಸಿತು. ರಾವಣನು ನೆಲಕ್ಕೆ ಬಿದ್ದನು. ರಾಕ್ಷಸರು ಚೆಲ್ಲಾಪಿಲ್ಲಿಯಾಗಿ ಓಡಿದರು.

ಕಪಿಸೈನ್ಯವು ಸಂತೋಷದಿಂದ ಓಲಾಡಿತು. ವಿಭೀಷಣನು ಅಣ್ಣನ ಸಾವಿನಿಂದ ಗೋಳಿಟ್ಟನು. ರಾವಣನು ಮಡಿದ ಸುದ್ದಿ ಕೇಳಿ, ಅಂತಃಪುರದಿಂದ ಸಾವಿರಾರು ಹೆಂಗಸರು ಬಂದರು. ಅವರ ಗೋಳು ಹೇಳತೀರದು. ರಾಮನು ಅವರಿಗೆಲ್ಲ ಸಮಾಧಾನ ಹೇಳಿದನು. ರಾವಣನ ದೇಹವನ್ನು ವಿಧಿವತ್ತಾಗಿ ಸಂಸ್ಕಾರ ಮಾಡಿಸಿದನು. ಲಕ್ಷ್ಮಣನು ರಾಮನ ಅಪ್ಪಣೆಯಂತೆ ಲಂಕೆಗೆ ಹೋಗಿ ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿದನು. ಆಮೇಲೆ ಸೀತೆ ಮಂಗಳ ಸ್ನಾನ ಮಾಡಿಕೊಂಡು ರಾಮನ ಬಳಿಗೆ ಬಂದಳು. ರಾಮನು ಸಂಶಯದ ಮಾತುಗಳನ್ನು ಆಡಿದನು. ಜನರೆಲ್ಲ ನೋಡುತ್ತಿರುವಂತೆ ಸೀತೆಯು ಬೆಂಕಿಗೆ ಪ್ರವೇಶ ಮಾಡಿ ಶುದ್ಧಳೆನಿಸಿಕೊಂಡಳು. ರಾಮನು, ಸೀತೆಯನ್ನು ಕರೆದುಕೊಂಡು ಅಯೋಧ್ಯೆಯ ಕಡೆ ಹೊರಟನು.



ಶ್ರೀರಾಮ ಪಟ್ಟಾಭೀಷೇಕ

ಭರತನು ನಂದಿ ಗ್ರಾಮದಲ್ಲಿ ಅಣ್ಣನಿಗಾಗಿ ಕಾದಿದ್ದನು. ರಾಮನು ತಮ್ಮಂದಿರನ್ನು ಕೂಡಿಕೊಂಡು ಅಯೋಧ್ಯೆಗೆ ಬಂದನು. ಪಟ್ಟಣದ ಹಿರಿಯರೂ, ಋಷಿಗಳೂ ಸೇರಿ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಿದರು. ಶ್ರೀರಾಮನು ಸಾವಿರಾರು ವರ್ಷ ರಾಜ್ಯವನ್ನು ಆಳುತ್ತ ಸುಖವಾಗಿದ್ದನು.

* * *

ಕನ್ನಡ ವಿಶ್ವವಿದ [illegible] ಟ್ಟಿದವರೆಗೆ ಉತ್ತಮ
ಹಾಗೂ ಉಪ [illegible] 'ಪಠ್ಯಪುಸ್ತಕ ರಚನಾ
ವಿಭಾಗ'ವನ್ನು [illegible] ಪಠ್ಯಪುಸ್ತಕ ರಚನೆ
ಮಾಡಬೇಕೆಂದು [illegible] ನವಸಾಕ್ಷರರಿಗಾಗಿ
ಪುಸ್ತಕ ಬರೆಸು [illegible] ಕ್ಕೆ ವಹಿಸಿಕೊಟ್ಟರು.
ವಿಶ್ವವಿದ್ಯಾಲಯ [illegible] ಖ್ಯಾತ ಲೇಖಕರನ್ನು,
ಭಾಷಾತಜ್ಞರನ್ನು [illegible] ರೆಲ್ಲರ ಅಭಿಪ್ರಾಯ,
ಸಲಹೆ, ಸಹಕಾರ [illegible] ಮುದ್ರಣ ವಿನ್ಯಾಸ,
ಚಿತ್ರಗಳ ಮಹತ [illegible] ನೇಕ ಸಲ ಚರ್ಚಿಸಿ
ಯೋಜನೆಯನ್ನು [illegible]

ನವಸಾಕ್ಷರರಿಗಾಗಿ [illegible] ಪ್ರಕಟವಾಗಿರುವ
ಪುಸ್ತಕಗಳನ್ನೆಲ್ಲ [illegible] ಭಾಷಾತಜ್ಞರಿಂದ
ಪರಿಶೀಲಿಸಲಾಯಿ [illegible] ಸಿಕೊಂಡು ಅವರಿಗೆ
ಕಮ್ಮಟಗಳನ್ನು [illegible] ತ ಆಯ್ದ ಜಿಲ್ಲೆ,
ತಾಲೂಕುಗಳಿಗೆ [illegible] ರುವವರಿಂದ ಅದರ
ಗುಣದೋಷಗಳ [illegible] ವಿಶ್ವವಿದ್ಯಾಲಯದ
ಗಣಕಯಂತ್ರದಲ್ಲಿ [illegible] ಹಾಯಕರು ನೀಡಿದ್ದ
ಮಾಹಿತಿಗಳನ್ನೆಲ್ಲ [illegible] ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು